ಕೇನ್ಸ್ ಮತ್ತು ಪರಿಣಾಮಕಾರಿ ಬೇಡಿಕೆ ತತ್ವ

ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಜಾನ್ ಮೇನಾರ್ಡ್ ಕೇನ್ಸ್ ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಶಾಲಿ ಅರ್ಥಶಾಸ್ತ್ರಜ್ಞ ಎಂಬುದು ನಿರ್ವಿವಾದ. ಅವರು ತಮ್ಮ ಬರಹಗಳಿಂದ ಮಾತ್ರವಲ್ಲದೇ ಬ್ರಿಟಿಷ್ ಸರ್ಕಾರಕ್ಕೆ ಹಲವು ವಿಷಯಗಳಿಗೆ ಸಂಬಂಧಪಟ್ಟ ಅಂತಾರಾಷ್ಟ್ರೀಯ ಒಪ್ಪಂದಗಳಲ್ಲಿ ಸಲಹೆಗಾರರಾಗಿ ಮತ್ತು ಹಲವು ನಿಯೋಗಗಳ(ವಿಶೇಷವಾಗಿ ಖಜಾನೆ ಸೇರಿದಂತೆ) ಸದಸ್ಯರಾಗಿಯೂ ಮಹತ್ವದ ಕಾರ್ಯ ಮಾಡಿದ್ದಾರೆ. ಮಾನವನ ಸ್ಥಿತಿಗತಿಗಳನ್ನು ಸುಧಾರಿಸಲು ಅರ್ಥಶಾಸ್ತ್ರಜ್ಞರು ಕೊಡುಗೆ ನೀಡಬೇಕು ಎನ್ನುವುದು ಅವರ ದೃಢ ನಂಬಿಕೆಯಾಗಿತ್ತು. "ಒಂದು ವೇಳೆ ಒಬ್ಬ ದಂತ ವೈದ್ಯನಂತೆ ತಾವೂ ಸಾಮಾನ್ಯರು ಹಾಗೂ ಸಾಧಾರಣ ಪ್ರತಿಭೆಯುಳ್ಳವರು ಎಂದು ತಮ್ಮನ್ನು ತಾವು ಭಾವಿಸಿಕೊಳ್ಳಲು ಅರ್ಥಶಾಸ್ತ್ರಜ್ಞರಿಗೆ ಸಾಧ್ಯವಾದಲ್ಲಿ ಅದು ಅದ್ಭುತವೇ ಸರಿ" ಎಂಬುದು ಕೇನ್ಸ್ ನಿಲುವಾಗಿತ್ತು. 1929 ರಲ್ಲಿ ಸಂಭವಿಸಿದ ವಿಶ್ವ ಆರ್ಥಿಕ ಮುಗ್ಗಟ್ಟಿನ ಸಂದರ್ಭವನ್ನು ಪರಿಗಣಿಸುವುದಾದರೆ ಆರ್ಥಿಕ ನೀತಿಯ ಬಗ್ಗೆ ವಿವೇಚನೆಯಿಂದ ವರ್ತಿಸುವುದು ಆ ಹೊತ್ತಿನ ಅಗತ್ಯವಾಗಿತ್ತು. ಮಾರುಕಟ್ಟೆ ಆರ್ಥಿಕತೆಯ ಆಧಾರದ ಮೇಲೆ ಬಂಡವಾಳಶಾಹಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಬಯಸಿದ ಪ್ರಬುದ್ಧ ಉದಾರವಾದಿಯಾದ ಕೇನ್ಸ್ , ಸರ್ಕಾರದ ಹಸ್ತಕ್ಷೇಪ ಮತ್ತು ನಿಯಂತ್ರಣದಿಂದ ಮಾತ್ರ ಬಂಡವಾಳಶಾಹಿ ವ್ಯವಸ್ಥೆಯನ್ನು ತನ್ನಷ್ಟಕ್ಕೆ ತಾನೇ ನಾಶವಾಗದಂತೆ ರಕ್ಷಿಸಲು ಸಾಧ್ಯ ಎಂದು ನಂಬಿದ್ದರು.

ಸಮಗ್ರ ಸಿದ್ಧಾಂತ ಮತ್ತು ಸಮಗ್ರ ನೀತಿ

ಕೇನ್ಸ್‌ನ ಸಂಪೂರ್ಣ ಕೃತಿಗಳನ್ನು ಗಮನಿಸಿದಾಗ ಹೆಚ್ಚು ಉತ್ಪಾದಕ ಮತ್ತು ಸಮಾನತೆಯ ಸಮಾಜಕ್ಕಾಗಿ ವಿವೇಚನೆಯ ತಳಹದಿಯ ಮೇಲೆ ನಿಂತಿರುವ ಆರ್ಥಿಕ ನೀತಿಗಾಗಿ ಅವರು ಹಂಬಲಿಸುವುದು ಎದ್ದುಕಾಣುತ್ತದೆ.

1919 ರಲ್ಲಿ ಅವರು 'ಶಾಂತಿಯ ಆರ್ಥಿಕ ಪರಿಣಾಮಗಳು (The Economic consequences of peace)' ಎನ್ನುವ ಕೃತಿಯನ್ನು ಪ್ರಕಟಿಸಿದರು. ಪ್ರಥಮ ವಿಶ್ವಯುದ್ಧದ ನಂತರ ವರ್ಸೈಲ್ಸ್‌ನಲ್ಲಿ ನಡೆದ ಶಾಂತಿ ಒಪ್ಪಂದದಲ್ಲಿ ಅವರು ನಿರ್ವಹಿಸಿದ ಪಾತ್ರದ ಹಿನ್ನೆಲೆಯಲ್ಲಿ ಆ ಕೃತಿಯಲ್ಲಿ ಮಹತ್ವದ ಮಾಹಿತಿ ಅಡಕವಾಗಿದೆ. ಆ ಕೃತಿ ಪ್ರಕಟವಾಗುತ್ತಲೇ ಜಗತ್ತಿನಾದ್ಯಂತ ಅತ್ಯಧಿಕ ಪ್ರತಿಗಳು ಮಾರಾಟವಾಗಿ ದಾಖಲೆ ಬರೆಯಿತು. ಈ ಪುಸ್ತಕದಲ್ಲಿ ಕೇನ್ಸ್ ಅವರು ಯುದ್ಧದಲ್ಲಿ ದೊಡ್ಡ ಪ್ರಮಾಣದಲ್ಲಿ ಪರಾಭವಗೊಂಡ ಜರ್ಮನಿಯು ಯುದ್ಧ ನಷ್ಟ ಪರಿಹಾರ ಪಾವತಿ ಕುರಿತ ಷರತ್ತುಗಳ ಬಗ್ಗೆ ತಮ್ಮ ಆತಂಕವನ್ನು ವಿವರಿಸಿದ್ದಾರೆ. ಯುದ್ಧ ನಷ್ಟ ಪರಿಹಾರ ಪಾವತಿಗೆ ಅಗತ್ಯವಿರುವ ಸಂಪನ್ಮೂಲ ಸಂಗ್ರಹಿಸುವುದು ಜರ್ಮನಿಯ ಆ ಪರಿಸ್ಥಿತಿಯಲ್ಲಿ ಅಸಾಧ್ಯ ಎಂಬುದು ಅವರ ಪ್ರಬಲ ನಿಲುವವಾಗಿತ್ತು. ಅಲ್ಲದೇ ಅಂತಹ ಪ್ರಯತ್ನವು ಜರ್ಮನಿ ಮಾತ್ರವಲ್ಲದೇ ಯುರೋಪಿನಾದ್ಯಂತ ಆರ್ಥಿಕ ಚಟುವಟಿಕೆಗಳನ್ನು ದುರ್ಬಲಗೊಳಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದರು. ಅಂತಹ ಒಂದು ಕ್ರಮ, ಯುದ್ಧದಲ್ಲಿ ವಿಜಯ ಸಾಧಿಸಿದ ದೇಶಗಳು ತಮ್ಮ ಕಾಲ ಮೇಲೆ ತಾವೇ ಚಪ್ಪಡಿ ಎತ್ತಿಹಾಕಿಕೊಂಡಂತೆ ಎಂದೂ ಅವರು ಎಚ್ಚರಿಸಿದ್ದರು. ಅವರ ಆ ಭವಿಷ್ಯ ನಿಜವಾಯಿತು. ಜರ್ಮನಿ ಯುದ್ಧ ಪರಿಹಾರ ನೀಡುವಲ್ಲಿ ವಿಫಲವಾಯಿತು. ಅಲ್ಲದೇ ಜರ್ಮನಿಯಲ್ಲಿ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡವು. ಪರಿಣಾಮವಾಗಿ ನಿರುದ್ಯೋಗ ಹೆಚ್ಚಾಯಿತು. ಆಮದುಗಳು ಕುಗ್ಗಿದವು. ಇದರಿಂದ ವಿದೇಶಿ ವಹಿವಾಟು ಕುಸಿಯಿತು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಕ್ಷೀಣಿಸುತ್ತಿರುವ ಆರ್ಥಿಕ ಸ್ಥಿತಿ ಹಿಟ್ಲರ್ ಮತ್ತು ನಾಝಿಗಳ ಉದಯಕ್ಕೆ ನಾಂದಿ ಹಾಡಿತು.

ಕೇನ್ಸ್ ತನ್ನ 'ಟ್ರ್ಯಾಕ್ಟ್ ಆನ್ ಮಾನಿಟರಿ ರಿಫಾರ್ಮ್' (1923) ಪುಸ್ತಕದಲ್ಲಿ ಹಣಕಾಸು ವ್ಯವಸ್ಥೆಯ ಸುಧಾರಣೆಯ ಸವಾಲಿನ ಬಗ್ಗೆ ಚರ್ಚಿಸಿದ್ದಾರೆ. ಆ ಮೂಲಕ ಹಣಕಾಸು

ಮಾರುಕಟ್ಟೆಗಳ ಬಗ್ಗೆ ತಮಗಿರುವ ಪ್ರಾಯೋಗಿಕ ಜ್ಞಾನವನ್ನು ಆ ಕೃತಿಯಲ್ಲಿ ಬಹಿರಂಗಪಡಿಸಿದ್ದಾರೆ. (ವಾಸ್ತವವಾಗಿ ಅವರ ಕಿರಿಯ ಸಹೋದ್ಯೋಗಿಗಳಾದ ರಿಚರ್ಡ್ ಕಾನ್ ಮತ್ತು ಪಿಯೆರೊ ಸ್ರಾಫ ಅವರೊಂದಿಗೆ ಷೇರು ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ವ್ಯವಹರಿಸಿದರು).

1930ರಲ್ಲಿ ಪ್ರಕಟಿಸಿದ 'ಟ್ರೆಟೈಸ್ ಆನ್ ಮನಿ (Treatise on money)' ಪುಸ್ತಕದಲ್ಲಿ ಕ'ನೂಟ್ ವಿಕ್ಸೆಲ್‌ನ 'ಬಡ್ಡಿ ಮತ್ತು ಬೆಲೆಗಳು' (1898) ಎಂಬ ಕೃತಿಯ ಆಧಾರದಲ್ಲಿ ಕೇನ್ಸ್, ರಾಷ್ಟ್ರೀಯ ಆದಾಯ, ಉದ್ಯೋಗ ಮತ್ತು ಹಣದ ಬಗ್ಗೆ ಸಮಗ್ರ ಆರ್ಥಿಕ ವಿಶ್ಲೇಷಣೆಯನ್ನು ಪ್ರಸ್ತುತಪಡಿಸಿದರು ಹಾಗೂ ತಮ್ಮ ಹಿಂದಿನ ಬರಹಗಳ ಸಾರದೊಂದಿಗೆ ಅದನ್ನು ಸಮಗ್ರಗೊಳಿಸಿದರು. ಉದಾಹರಣೆಗೆ; ತನ್ನದೇ ವ್ಯವಸ್ಥೆಗೆ ಆರ್ಥಿಕತೆಯನ್ನು ಬಿಟ್ಟರೆ ಅದು ತನ್ನಷ್ಟಕ್ಕೇ ಶ್ರಮ ಪೂರ್ಣೋದ್ಯೋಗದ ಕಡೆಗೆ ಸಾಗುತ್ತದೆ ಎಂದು ಕಲ್ಪಿಸಿಕೊಳ್ಳಲು ಯಾವುದೇ ಸಕಾರಣವಿಲ್ಲವೆಂದು ಅವರು ವಾದಿಸಿದರು. ಆದಾಗ್ಯೂ ಈ ಕೃತಿಯ ಹೊರತಾಗಿಯೂ ಕೇನ್ಸ್, ಅರ್ಥಶಾಸ್ತ್ರದ 'ಒಪ್ಪಿತ ತತ್ವ'ಗಳನ್ನು ಮೀರಲು ಸಾಧ್ಯವಾಗಲಿಲ್ಲ ಮತ್ತು ಅಲ್ಲದೇ ವಿಶ್ವ ಆರ್ಥಿಕ ಮುಗ್ಗಟ್ಟು ಮತ್ತು ಅದರ ವಿರುದ್ಧ ಹೋರಾಡಲು ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆರ್ಥಿಕ ವ್ಯವಸ್ಥೆಯ ಕಾರ್ಯ ನಿರ್ವಹಣೆ ಮತ್ತು ಅದರ ಕಾರ್ಯನಿರ್ವಹಣೆಯಲ್ಲಿನ ವೈಫಲ್ಯ; ಎರಡನ್ನೂ ವಿವರಿಸುವ ಸಾಮಾನ್ಯ ಸಿದ್ಧಾಂತದ ಅಗತ್ಯತೆ ಇತ್ತು. ಹೀಗಾಗಿ ಕೇನ್ಸ್ 1936 ರಲ್ಲಿ ತಮ್ಮ 'ಉದ್ಯೋಗ, ಬಡ್ಡಿ ಮತ್ತು ಹಣದ ಸಾಮಾನ್ಯ ಸಿದ್ಧಾಂತ(The General Theory of Employment, Interest and Money) ಪ್ರಕಟಿಸುವ ಮೂಲಕ ಆ ಅಗತ್ಯ ಪೂರೈಸಿದರು.

ಅವರ ಈ ಮಹತ್ವದ ಕೃತಿಯಲ್ಲಿ ಅಡಕವಾಗಿರುವ ಅನೇಕ ವಿಷಯಗಳು ತಮ್ಮಷ್ಟಕ್ಕೆ ತಾವು ನವೀನವಾಗಿಲ್ಲ. ಆದರೆ ಅವುಗಳು ಸಂಯೋಜನೆಯಲ್ಲಿ ನವೀನವಾಗಿವೆ. ಇದನ್ನು ನಾವು ವಿವರಿಸಲು ಪ್ರಾರಂಭಿಸುವ ಮೊದಲು ಪ್ರಮುಖ ವಿಷಯವನ್ನು ಸ್ಮರಿಸುವುದಾದರೆ; ಪೋಲೆಂಡನ ಅರ್ಥಶಾಸ್ತ್ರಜ್ಞ ಮೈಕಲ್ ಕಲೇಕಿ (1899-1970)ಯವರು 1933 ರಲ್ಲಿ ಪ್ರಕಟಿಸಿದ ತಮ್ಮ ಹಲವಾರು ಪ್ರಬಂಧಗಳಲ್ಲಿ ಕೇನ್ಸ್ ಅವರ ಸಿದ್ಧಾಂತವನ್ನು ಊಹಿಸಿದ್ದರು. ಅವರ ಪ್ರಬಂಧಗಳು ಆರಂಭದಲ್ಲಿ ಪೋಲಿಷ್ (ಪೋಲೆಂಡಿನ ಭಾಷೆಯಲ್ಲಿ) ಭಾಷೆಯಲ್ಲಿ ಪ್ರಕಟವಾಗಿ ಬಳಿಕ ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿವೆ. ಹೀಗಾಗಿ ಅವು ಹೆಚ್ಚು ಓದುಗರಿಗೆ ಲಭ್ಯವಾಗಿವೆ. ಕೇನ್ಸ್ ಅವರು ಕಲೇಕಿಯವರಿಂದ ಪ್ರಭಾವಿಸಲ್ಪಟ್ಟಿದ್ದರು ಎನ್ನುವುದಕ್ಕೆ ಯಾವುದೇ ಪುರಾವೆಗಳಿಲ್ಲ. ಕಲೇಕಿ ಅವರು ಕೇನ್‌ನಂತೆಯೇ ಹೂಡಿಕೆಯ ಮಟ್ಟವು ರಾಷ್ಟ್ರೀಯ ಆದಾಯ ಮತ್ತು ಉಳಿತಾಯವನ್ನು ನಿರ್ಧರಿಸುತ್ತದೆ ಎಂದು ವಾದಿಸಿದ್ದರು. ಇದರಿಂದ ಹೂಡಿಕೆಯು ಮೂಲತಃ ಸ್ವಯಂ ಹಣಕಾಸು ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಕಲೇಕಿಯ ಪ್ರಸಿದ್ಧ ಹೇಳಿಕೆಯತೆ "ಬಂಡವಾಳಶಾಹಿಗಳು ವೆಚ್ಚ ಮಾಡುವುದನ್ನು ಗಳಿಸುತ್ತಾರೆ. ಕೆಲಸಗಾರರು ತಾವು ಗಳಿಸಿದ್ದನ್ನು ವೆಚ್ಚ ಮಾಡುತ್ತಾರೆ". ಉನ್ನತ ಮಟ್ಟದ ಹೂಡಿಕೆಯು ಉನ್ನತ ಮಟ್ಟದ ಪರಿಣಾಮಕಾರಿ ಬೇಡಿಕೆಗೆ ಅವಕಾಶ ಮಾಡಿಕೊಟ್ಟು ಹೆಚ್ಚು ಲಾಭಕ್ಕೆ ಕಾರಣವಾಗುತ್ತದೆ. ಇಲ್ಲಿ ಕಲೇಕಿಯವರ ಊಹೆಯು ಮಾರುಕಟ್ಟೆ ಶಕ್ತಿಗಳ ಕೇಂದ್ರೀಕರಣವಾಗಿದ್ದು, (ಕೇನ್ಸ್‌ನಲ್ಲಿ ಇದು ಹೆಚ್ಚಿನ ಪಾತ್ರ ವಹಿಸುವುದಿಲ್ಲ) ಅದು ಸಮಗ್ರ ಆರ್ಥಿಕ "ಏಕಸ್ವಾಮ್ಯದ ಮಟ್ಟ"ದಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ. ಇದು ರಾಷ್ಟ್ರೀಯ ಆದಾಯದಲ್ಲಿನ ಲಾಭದ ಪಾಲನ್ನು ನಿರ್ಧರಿಸುತ್ತದೆ. ಅವನ ಪ್ರಶಂಸನೀಯ ಕೆಲಸದ ಹೊರತಾಗಿಯೂ ಕೇನ್ಸ್‌ಗೆ ಸಿಕ್ಕಂತಹ ಪ್ರಾಮುಖ್ಯತೆ ಕಲೇಕಿಗೆ ಸಿಗಲಿಲ್ಲ. ಜೀವಮಾನವಿಡೀ ಆತ ಕೇನ್ಸ್‌ನ ನೆರಳಾಗಿಯೇ ಉಳಿದುಬಿಟ್ಟ.

ಸಾಂಪ್ರದಾಯಿಕತೆಯ ಟೀಕೆ

'ದ ಜನರಲ್ ಥಿಯರಿ'ಯು ಸೇ ಅವರ ಮಾರುಕಟ್ಟೆ ನಿಯಮದ ನಿಯೋ-ಕ್ಲಾಸಿಕಲ್ ಪಂಥದ ಹೇಳಿಕೆಯನ್ನು ಗುರಿಯಾಗಿಸಿಕೊಂಡಿದೆ. ಅವರು ವಿಶೇಷವಾಗಿ ತಮ್ಮ ಪ್ರಬಂಧದಲ್ಲಿ ನಿರುದ್ಯೋಗವು ಕೇವಲ ನೈಜ ವೇತನದ ಅಧಿಕ ಹೆಚ್ಚಳದ ಪರಿಣಾಮವಾಗಿದೆ ಎಂದು

ಹೇಳಿದ್ದಾರೆ. (ಕೇನ್ಸ್ ತಾವೇ ಕ್ಲಾಸಿಕಲ್ ಸಿದ್ಧಾಂತದ ಬಗ್ಗೆ ಮಾತನಾಡಿದ್ದಾರೆ. ಆದರೆ ಅವರು ನಿಜವಾಗಿಯೂ ನಿಯೋ ಕ್ಲಾಸಿಕಲ್ ಸಿದ್ಧಾಂತವನ್ನು ಗುರಿಯಾಗಿಸಿಕೊಂಡಿದ್ದರು. ಅವರು ಯಾವಾಗಲೂ ಆರ್ಥಿಕ ಚಿಂತನೆಯ ಇತಿಹಾಸದ ಬಗ್ಗೆ ಖಚಿತ ನಿಲುವನ್ನು ತೋರಿಸಲಿಲ್ಲ). ವೇತನ ನಿರ್ಧಾರದಲ್ಲಿ ಕೇವಲ ಹಣ ಅಥವಾ ನಾಮಕಾವಸ್ಥೆಯ ವೇತನ ಮಾತ್ರ ಸಮಸ್ಯೆಯಾಗಿದ್ದು ನೈಜ ವೇತನವಲ್ಲ. ಇದು ಸರಕುಗಳ ಬೆಲೆ ಮಟ್ಟಕ್ಕೆ (ಅಂದರೆ; ಹಣದ ವೇತನವನ್ನು ಬೆಲೆ ಮಟ್ಟದಿಂದ ಭಾಗಿಸಿದಾಗ ಸಿಗುವ ಮೊತ್ತ) ವೇತನದ ನೈಜ ಕೊಳ್ಳುವ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಕುಸಿಯುತ್ತಿರುವ ನಾಮಕಾವಸ್ಥೆಯ ವೇತನದ ಪರಿಣಾಮಗಳನ್ನು ಒಟ್ಟಾರೆ ಆರ್ಥಿಕತೆಯ ಹಿನ್ನೆಲೆಯಲ್ಲಿ ಪರಿಗಣಿಸಬೇಕು ಎಂದು ಕೇನ್ಸ್ ಪ್ರತಿಪಾದಿಸಿದ್ದಾನೆ. ಕಾರ್ಮಿಕ ಮಾರುಕಟ್ಟೆಯ ಭಾಗಶಃ ಸಮತೋಲನ ವಿಶ್ಲೇಷಣೆ ಸಫಲವಾಗದ ಒಂದು ಸಂಗತಿ ಇದು. ಕೇನ್ಸ್ ಪ್ರಕಾರ ಕಾರ್ಮಿಕರ ವೇತನಗಳ ಕುಸಿತವು ಮೊಟ್ಟ ಮೊದಲಿಗೆ ಮತ್ತು ಬಹಳ ಮುಖ್ಯವಾಗಿ ಅನುಭೋಗಿ ಸರಕುಗಳ ಬೇಡಿಕೆಯನ್ನು ಕುಗ್ಗಿಸುತ್ತವೆ. ಇದರ ಪರಿಣಾಮವಾಗಿ ಅನುಭೋಗಿ ಸರಕುಗಳ ಬೆಲೆ ಕುಸಿತ ಉಂಟಾಗುತ್ತದೆ (ಬೆಲೆ ನಮ್ಯತೆಯ ಕಲ್ಪನೆಯ ಆಧಾರದ ಮೇಲೆ). ಆದರೆ ಒಂದು ವೇಳೆ ವೇತನಗಳು ಮತ್ತು ಬೆಲೆಗಳು ವ್ಯಾಪಕವಾಗಿ ಪರಸ್ಪರ ಸಮನಾಂತರವಾಗಿ ಕುಸಿದರೆ ನೈಜ ವೇತನ ಬಹುತೇಕ ಸ್ಥಿರವಾಗಿ ಉಳಿಯುತ್ತದೆ. ಅಲ್ಲದೇ ನಿಯೋ-ಕ್ಲಾಸಿಕಲ್ ಸಿದ್ಧಾಂತ ಅವಲಂಬಿಸಿರುವ ತಂತ್ರದ ಕಾರ್ಯವಿಧಾನ ಅನ್ವಯಿಸುವುದಿಲ್ಲ.

ಮಹಾಮುಗ್ಗಟ್ಟಿನ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಬೆಲೆಗಳು ಮತ್ತು ವೇತನಗಳು ವಾಸ್ತವವಾಗಿ ಜೊತೆ ಜೊತೆಯಲ್ಲಿಯೇ ಕುಸಿಯುತ್ತವೆ. ಇದರಿಂದ ನೈಜ ವೇತನ ಸ್ವಲ್ಪ ಮಟ್ಟಿನ ಹೆಚ್ಚಳ ಕಂಡಿತು ಕೂಡ. ಅದಕ್ಕೂ ಹೆಚ್ಚಾಗಿ ಬೇಡಿಕೆ ಕಡಿಮೆಯಾದಂತೆ ಸ್ಥಾವರ ಮತ್ತು ಉಪಕರಣಗಳ ಬಳಕೆಯ ಸಾಮರ್ಥ್ಯ ಕಡಿಮೆಯಾಗುತ್ತದೆ. ಇದರಿಂದಾಗಿ, ವ್ಯವಹಾರದಲ್ಲಿ ಹಣ ತೊಡಗಿಸಲು ಉತ್ತೇಜನವೇ ದೊರೆಯುವುದಿಲ್ಲ. ಆಗ ಬಳಕೆಯ ದರ ಕಡಿಮೆಯಾಗುತ್ತಿರುವುದರಿಂದ ಉತ್ಪಾದಕ ಸಾಮರ್ಥ್ಯವನ್ನು ಏಕೆ ಹೆಚ್ಚಿಸಬೇಕು? ಆರ್ಥಿಕತೆಯಲ್ಲಿ ಸಮಗ್ರ ಬೇಡಿಕೆಯು ಅನುಭೋಗಿ ಮತ್ತು ಹೂಡಿಕೆ ಬೇಡಿಕೆಯ ಮೊತ್ತಕ್ಕೆ ಸಮನಾಗುವುದರಿಂದ (ಒಂದು ವೇಳೆ ಸರಳತೆಗಾಗಿ ನಾವು ಎಲ್ಲಾ ಸರ್ಕಾರಿ ಚಟುವಟಿಕೆ ಮತ್ತು ವಿದೇಶಿ ವ್ಯಾಪಾರವನ್ನು ಹೊರಗಿಟ್ಟರೆ) ಸಮಗ್ರ ಬೇಡಿಕೆಯು ವೇತನದ ಜೊತೆಗೆ ಕಡಿಮೆಯಾಗುತ್ತದೆ ಎನ್ನುವ ತೀರ್ಮಾನಕ್ಕೆ ಕೇನ್ಸ್ ಬಂದರು. ಇದು ಹೆಚ್ಚುವರಿ ಉದ್ಯೋಗಸ್ಥರ ವಜಾಕ್ಕೆ ಕಾರಣವಾಗುತ್ತದೆ. ಇದರಿಂದ ಸನ್ನಿವೇಶ ಇನ್ನೂ ಹದಗೆಡುತ್ತದೆ. ಇದು ನಿಯೋ-ಕ್ಲಾಸಿಕಲ್ ಅರ್ಥಶಾಸ್ತ್ರಜ್ಞರು ವಾದಿಸಿದ್ದಕ್ಕೆ ತದ್ವಿರುದ್ಧವಾದ ಬೆಳವಣಿಗೆ.

ಕೇನ್ಸ್‌ಪ್ರಕಾರ ವೇತನಗಳು ಮತ್ತು ನಂತರ ಬೆಲೆಗಳು ಕಡಿಮೆಯಾದಾಗ ಇತರೆ ಎರಡು ಅಂಶಗಳು ಕಾರ್ಯರೂಪಕ್ಕೆ ಬರುತ್ತವೆ. ಸರಕುಗಳ ಬೆಲೆಗಳು ಮತ್ತಷ್ಟು ಕಡಿಮೆಯಾಗುವ ನಿರೀಕ್ಷೆಯಲ್ಲಿ ಬೇಡಿಕೆ ಇನ್ನಷ್ಟು ಕಡಿಮೆಯಾಗಬಹುದು. ಇದರಿಂದ ಮುಖ್ಯವಾಗಿ ಸಾಲಗಾರರು ಎದುರಿಸುತ್ತಿರುವ ಪರಿಸ್ಥಿತಿ ಇನ್ನೂ ಹದಗೆಡುತ್ತದೆ (ನಿರಂತರ ವ್ಯವಹಾರಗಳು). ಏಕೆಂದರೆ ಅವರ ಸಾಲದ ನೈಜ ಮೌಲ್ಯ ಹೆಚ್ಚಾಗುತ್ತದೆ. ಸಾಲಗಾರರ ಬಿಕ್ಕಟ್ಟು ಉಲ್ಬಣಗೊಳ್ಳುತ್ತದೆ. ಹೀಗಾಗಿ ಉದ್ಯಮಗಳು ಸಾಲ ತೀರಿಸಲಾಗದೇ ದಿವಾಳಿಯಾಗುತ್ತವೆ. ಇದು ನಂತರ ಸಾಲಗಾರರ ಮೇಲೆ ಮಾರಕ ಪರಿಣಾಮಗಳನ್ನು ಬೀರುತ್ತದೆ. ಮತ್ತು ಇದರ ಪರಿಣಾಮವಾಗಿ ಸಾಲಗಾರರ ಮೇಲೆ ಸಾಲದಾತರು ಇಟ್ಟಿರುವ ನಂಬಿಕೆ ತಲೆಕೆಳಗಾಗುತ್ತದೆ. ಆರ್ಥಿಕ ವ್ಯವಸ್ಥೆಯು ಸ್ವಯಂ ವೇಗದ ಅಸ್ಥಿರತೆಯ ಮಟ್ಟವನ್ನು ತಲುಪುತ್ತದೆ(ಸಾಲದ ಮೌಲ್ಯ ಕುಸಿತ ಎಂದು ಹೇಳಲಾಗುವ). ಉದ್ಯೋಗವನ್ನು ಹೆಚ್ಚಿಸುವ ಸಲುವಾಗಿ ವೇತನ ಕಡಿತ ಮಾಡಬೇಕು ಎಂಬ ನಿಯೋ-ಕ್ಲಾಸಿಕಲ್ ಆರ್ಥಿಕ ನೀತಿಯ ಪರಿಹಾರ, ಪರಿಸ್ಥಿತಿಯನ್ನು ಸುಧಾರಿಸುವುದರ ಬದಲಿಗೆ ಇನ್ನಷ್ಟು ಜಟಿಲಗೊಳಿಸುತ್ತದೆ. ವಿಶ್ವ ಆರ್ಥಿಕ ಮುಗ್ಗಟ್ಟನ್ನು ಒಳಗೊಂಡಂತೆ ಅಸಂಖ್ಯಾತ ಐತಿಹಾಸಿಕ ದೃಷ್ಟಾಂತಗಳು ಕೇನ್ಸ್ ಅವರ ಈ ವಾದವನ್ನು ಸಮರ್ಥಿಸುತ್ತವೆ. ಸಾಂಪ್ರದಾಯಿಕ ನಿಯೋ-ಕ್ಲಾಸಿಕಲ್ ಸಿದ್ಧಾಂತವು 'ಸಂಯೋಜನೆಯ ಭ್ರಮೆ'ಯಿಂದ ಬಳಲುತ್ತದೆ ಎಂದು ಹೇಳಲಾಗುತ್ತದೆ. ಭಾಗಶಃ ಸಮತೋಲನದ ಚೌಕಟ್ಟಿನೊಳಗಡೆ ಪಡೆಯಲಾದ ಫಲಿತಾಂಶಗಳು

ಅಗತ್ಯವಾಗಿ ಆರ್ಥಿಕ ವ್ಯವಸ್ಥೆಗೆ ಅನ್ವಯವಾಗುವುದಿಲ್ಲ. ಒಟ್ಟು ಮೊತ್ತವು, ಅದರ ಎಲ್ಲಾ ಬಿಡಿ ಭಾಗಗಳ ಮೊತ್ತ ಮಾತ್ರವಾಗಿರುವುದಿಲ್ಲ. ಒಂದು ವೇಳೆ ವ್ಯವಸ್ಥೆಯು ಪೂರ್ಣೋದ್ಯೋಗ ಮಟ್ಟದಲ್ಲಿ ಸ್ವಯಂ ಸಮತೋಲನ ಸಾಧಿಸದಿದ್ದರೆ ಆರ್ಥಿಕತೆಯಲ್ಲಿ ಅದನ್ನು ಸಾಧಿಸಲು ತನ್ನಷ್ಟಕ್ಕೆ ಬಿಟ್ಟರೆ ಆರ್ಥಿಕ ನೀತಿಯ ಅಗತ್ಯತೆ ಕಂಡುಬರುತ್ತದೆ. ಪರಿಣಾಮಕಾರಿ ಬೇಡಿಕೆಯನ್ನು ಹಣಕಾಸು ಮತ್ತು ಉತ್ತಮ ಕ್ರಮಗಳ ಮೂಲಕ(ಕಡಿಮೆ ಹಣದ ಬಡ್ಡಿದರ, ಸಾರ್ವಜನಿಕ ವೆಚ್ಚದಲ್ಲಿ ಹೆಚ್ಚಳ, ತೆರಿಗೆ ಕಡಿತ ಇತ್ಯಾದಿ) ಉತ್ತೇಜಿಸಬೇಕು ಹಾಗೂ ಸ್ಥಿರಗೊಳಿಸಬೇಕೆಂದು ಕೇನ್ಸ್ ಸಲಹೆ ನೀಡಿದ್ದಾರೆ.

ಪರಿಣಾಮಕಾರಿ ಬೇಡಿಕೆ ತತ್ವ

ನಾವೀಗ ಆರ್ಥಿಕ ವ್ಯವಸ್ಥೆಯು ತನ್ನ ಉತ್ಪಾದನಾ ಸಂಪನ್ಮೂಲಗಳನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸುತ್ತಿಲ್ಲ ಎನ್ನುವ ಕೇನ್ಸ್ ದೃಷ್ಟಿಕೋನವನ್ನು ನೋಡೋಣ. ನಿಯೋ-ಕ್ಲಾಸಿಕಲ್ ಅರ್ಥಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಂತೆ ಆರ್ಥಿಕ ವ್ಯವಸ್ಥೆಯು ಪೂರೈಕೆ ಮಿತಿಗೊಳಪಟ್ಟಿಲ್ಲ; ಬದಲಾಗಿ ಅದು ಬೇಡಿಕೆ ಮಿತಿಗೊಳಪಟ್ಟಿದೆ (ಉತ್ಕರ್ಷದ ಹಂತವನ್ನು ಹೊರತುಪಡಿಸಿ) ಎಂಬುದು ಕೇನ್ಸ್ ಅಭಿಪ್ರಾಯ. ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ; ಕೇನ್ಸ್ ಅವರ ಪರಿಣಾಮಕಾರಿ ಬೇಡಿಕೆ ತತ್ವವು, ಯಾವಾಗಲೂ ಆರ್ಥಿಕತೆಯ ಎಲ್ಲಾ ಉತ್ಪಾದನಾ ಸಂಪನ್ಮೂಲಗಳನ್ನು ಬಳಸಿಕೊಳ್ಳುವಷ್ಟು ಸರಾಸರಿ ಹೂಡಿಕೆ ಬೇಡಿಕೆ ವ್ಯಾಪಕವಾಗಿರುತ್ತದೆ ಎಂದು ಊಹಿಸಿಕೊಳ್ಳಲು ಸಕಾರಣಗಳಿಲ್ಲ. ಇದನ್ನು ತಿಳಿದುಕೊಳ್ಳಲು ನಾವು ಖಾಸಗಿ ಸಮಗ್ರ ಸ್ಥಳೀಯ ಪರಿಣಾಮಕಾರಿ ಬೇಡಿಕೆಯ ಎರಡು ಅಂಶಗಳಾದ ಅನುಬೋಗ ವೆಚ್ಚ ಮತ್ತು ಹೂಡಿಕೆ ವೆಚ್ಚಗಳು ಹೇಗೆ ನಿರ್ಧರಿಸಲ್ಪಡುತ್ತವೆ ಎನ್ನುವುದನ್ನು ನೋಡೋಣ.

ಅದಕ್ಕೂ ಮುನ್ನ ಕೇನ್ಸ್‌ನ ಪ್ರಕಾರ ಉಳಿತಾಯವೆಂದರೆ ಏನು ಎಂಬುದನ್ನು ಗಮನಿಸೋಣ. ಆತನ ಪ್ರಕಾರ ಉಳಿತಾಯ ಎಂದರೆ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಇಲ್ಲದಿರುವುದು ಎಂದರ್ಥ. ಅಂದರೆ ಸರಕು ಮತ್ತು ಸೇವೆಗಳ ಮೇಲೆ ವೆಚ್ಚ ಮಾಡದೆ ಉಳಿತಾಯಗಾರನು ತನ್ನ ಹಣ ರೂಪಿ ಆದಾಯದ ಒಂದು ಭಾಗವನ್ನು ನಗದು ರೂಪದಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುತ್ತಾನೆ. ಅಂದರೆ ಆತ ಸರಕು ಮತ್ತು ಸೇವೆಗಳನ್ನು ಕೊಂಡುಕೊಳ್ಳಲು ಬಳಸುವುದಿಲ್ಲ. ಉಳಿತಾಯವು ಖರ್ಚುಗಳ ಹರಿವಿನಲ್ಲಿ ಸೋರಿಕೆಯನ್ನೊಳಗೊಂಡಿದೆ ಹಾಗೂ ಆ ಸೋರಿಕೆ ಸಮರ್ಪಕ ಪರಿಣಾಮಕಾರಿ ಬೇಡಿಕೆಗೆ ಸಮಸ್ಯೆಯನ್ನುಂಟು ಮಾಡುತ್ತದೆ. ಆಡಂ ಸ್ಮಿತ್ ಅವರು 'ಮಿತವ್ಯಯದ ಮಾನವ' ಪರಿಕಲ್ಪನೆಯ ಬಗ್ಗೆ ವ್ಯಕ್ತಪಡಿಸಿದ ಅಪಾರ ಮೆಚ್ಚುಗೆಯನ್ನು ಉಳಿತಾಯಗಾರ ಉಳಿತಾಯದ ಜೊತೆಗೆ ಹೂಡಿಕೆದಾರನೂ ಆಗಿದ್ದಾಗ ಮಾತ್ರ ಸಮರ್ಥಿಸಬಹುದು. ಉಳಿತಾಯಗಾರನು ತಾನು ಉಳಿತಾಯ ಮಾಡಿದ ಹಣವನ್ನು ಅನುಭೋಗಿ ಸರಕುಗಳ (ಆಹಾರ, ಪಾನೀಯಗಳು, ಬಟ್ಟೆ ಇತ್ಯಾದಿ) ಮೇಲೆ ವೆಚ್ಚ ಮಾಡದೆ ಹೂಡಿಕೆ ಸರಕುಗಳ (ಸ್ಥಾವರ ಮತ್ತು ಉಪಕರಣಗಳು, ಕಚ್ಚಾ ವಸ್ತುಗಳು ಇತ್ಯಾದಿ) ಮೇಲೆ ವೆಚ್ಚ ಮಾಡಿದಾಗ ಮಾತ್ರ ಆಡಂ ಸ್ಮಿತ್ ಅವರ ಆ ಮೆಚ್ಚುಗೆ ಸಮರ್ಥನೀಯ. ಈ ದೃಷ್ಟಿಕೋನದಲ್ಲಿ ವೆಚ್ಚದ ಹರಿವಿನ ರೂಪದಲ್ಲಿ ಹೂಡಿಕೆ "ಒಳಸುರಿ"ಯನ್ನು ಒಳಗೊಂಡಿದೆ. ಆಗ ಅದು ಉಳಿತಾಯದಿಂದ ಉಂಟಾಗುವ ಸೋರಿಕೆಯನ್ನು ಸರಿದೂಗಿಸುತ್ತದೆ.

"ಮೂಲಭೂತ ಮಾನಸಿಕ ನಿಯಮ" ಎಂದು ವ್ಯಾಖ್ಯಾನಿಸಿರುವ ತಮ್ಮ ಪ್ರತಿಪಾದನೆಯಲ್ಲಿ ಕೇನ್ಸ್, ಸಮಗ್ರ ಅನುಭೋಗ ವೆಚ್ಚವು (C) ಬಹಳ ಮುಖ್ಯವಾಗಿ ರಾಷ್ಟ್ರೀಯ ಆದಾಯ (Y) ದ ಮಟ್ಟವನ್ನು ಅವಲಂಬಿಸಿದೆ. ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಅನುಭೋಗ ವೆಚ್ಚವೂ ಹೆಚ್ಚಾಗುತ್ತದೆ. ಆರ್ಥಿಕ ವ್ಯವಸ್ಥೆಯಲ್ಲಿ ಅನುಭೋಗಿಗಳು ಸಕ್ರಿಯ ವಾಹಕಗಳಲ್ಲ; ಬದಲಾಗಿ ಹೂಡಿಕೆದಾರರು ಸಕ್ರಿಯ ವಾಹಕವಾಗಿದ್ದಾರೆ. ರಾಷ್ಟ್ರೀಯ ಆದಾಯದಲ್ಲಿನ ಬದಲಾವಣೆಗೆ ಪ್ರತಿಕ್ರಿಯೆಯಾಗಿ ಅನುಭೋಗಿಗಳು ನಿಷ್ಕ್ರಿಯರಾಗಿರುತ್ತಾರೆ. ಅನುಭೋಗಿ ಸರಳ ರೇಖೆ ಬಿಂಬಕ $C=cY$ ಆಗಿದೆ. ಇದರಲ್ಲಿ 'c' ಅನುಭೋಗ ಪ್ರವೃತ್ತಿಯನ್ನು

ಪ್ರತಿನಿಧಿಸುತ್ತದೆ. (ಕೇನ್ಸ್ ರು ಸ್ವಲ್ಪ ಭಿನ್ನವಾದ ಅನುಭೋಗ ಬಿಂಬಕವನ್ನು ಕಲ್ಪಿಸಿಕೊಂಡಿದ್ದಾರೆ. ಇದರಲ್ಲಿ ಅನುಭೋಗ ಪ್ರವೃತ್ತಿ ಸ್ಥಿರವಾಗಿರುವುದಿಲ್ಲ. ಆದರೆ ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಅನುಭೋಗ ಪ್ರವೃತ್ತಿ ಹೆಚ್ಚಾಗುತ್ತದೆ ಎನುತ್ತಾರೆ ಅವರು. ಆದರೆ ಅದು ಇಲ್ಲಿ ಮುಖ್ಯವಲ್ಲ). c=0.8 ಅಥವಾ ಶೇಕಡ 80 (ಗಳಿಸಲಾದ ಪ್ರತಿ ಡಾಲರಿನಲ್ಲಿ 80 ಸೆಂಟುಗಳನ್ನು ಅನುಭೋಗ ವೆಚ್ಚಕ್ಕಾಗಿ ಬಳಸುತ್ತಾರೆ). ಒಟ್ಟು ರಾಷ್ಟ್ರೀಯ ಆದಾಯ 100 ಶತಕೋಟಿ ಡಾಲರ್ ಆಗಿದ್ದಾಗ ಅನುಭೋಗ ವೆಚ್ಚ 80 ಶತಕೋಟಿ ಡಾಲರಿನಷ್ಟಾಗುತ್ತದೆ. ಆದಾಯದಲ್ಲಿ ಅನುಭೋಗ ವೆಚ್ಚವನ್ನು ಕಳೆದಾಗ ಉಳಿಯುವುದು ಉಳಿತಾಯವಾದ್ದರಿಂದ S=Y-C ಯು ಉಳಿತಾಯ ಬಿಂಬಕವಾಗಿದೆ. ಇದು ನೀಡಲಾದ ಅನುಭೋಗ ಬಿಂಬಕ S=sYಗೆ ಅನುರೂಪವಾಗಿದೆ. ಇದರಲ್ಲಿ 's' ಉಳಿತಾಯ ಪ್ರವೃತ್ತಿಯನ್ನು ಅಥವಾ ಉಳಿತಾಯ ದರವನ್ನು ಸೂಚಿಸುತ್ತದೆ. ನಿಸ್ಸಂಶಯವಾಗಿ ಹೇಳುವುದಾದರೆ; ಆದಾಯದ ಯಾವ ಶೇಕಡಾಂಶ ಅನುಭೋಗ ವೆಚ್ಚವಾಗಿರುವುದಿಲ್ಲವೋ ಅದು ಉಳಿತಾಯವಾಗಿರುತ್ತದೆ. ಅಂದರೆ s=I-c. ಈ ಮೇಲಿನ ಉದಾಹರಣೆಯಲ್ಲಿ 1-0.8=0.2 ಅಥವಾ ಶೇಕಡ 20ರಷ್ಟು. ಆ ಪ್ರಕಾರ, 100 ಶತಕೋಟಿ ಡಾಲರ್ ಆದಾಯದಲ್ಲಿ 20 ಶತಕೋಟಿ ಡಾಲರ್ ಉಳಿತಾಯ ಆಗಿರುತ್ತದೆ. ಆದ್ದರಿಂದ ರಾಷ್ಟ್ರೀಯ ಆದಾಯ ಹೆಚ್ಚಾದಾಗ ಅಥವಾ ಕಡಿಮೆಯಾದಾಗ ಅನುಭೋಗ ವೆಚ್ಚ ಮತ್ತು ಉಳಿತಾಯವೂ ಕ್ರಮವಾಗಿ ಹೆಚ್ಚಾಗುತ್ತದೆ ಅಥವಾ ಕಡಿಮೆಯಾಗುತ್ತದೆ. ಒಟ್ಟಾರೆ ಆದಾಯ 200 ಶತಕೋಟಿ ಡಾಲರ್ ಆಗಿದ್ದಾಗ ಅನುಭೋಗ ವೆಚ್ಚ 160 ಶತಕೋಟಿ ಡಾಲರ್ ಆಗಿದ್ದು ಉಳಿತಾಯವು 40 ಶತಕೋಟಿ ಡಾಲರ್ ಆಗಿರುತ್ತದೆ.

ಅನುಭೋಗ ಮತ್ತು ಉಳಿತಾಯಗಳು ಮುಖ್ಯವಾಗಿ ರಾಷ್ಟ್ರೀಯ ಆದಾಯದ ಮಟ್ಟವನ್ನು ಅವಲಂಬಿಸಿವೆ. ಆದರೆ ರಾಷ್ಟ್ರೀಯ ಆದಾಯವನ್ನು ಯಾವುದು ನಿರ್ಧರಿಸುತ್ತದೆ? ಎಂಬುದು ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆ. ಅದಕ್ಕೆ ಕೇನ್ಸ್ ಅವರು ಹೂಡಿಕೆಯ ಬೇಡಿಕೆ ಮಟ್ಟ ರಾಷ್ಟ್ರೀಯ ಆದಾಯವನ್ನು ನಿರ್ಧರಿಸುತ್ತದೆ ಎಂದು ಉತ್ತರಿಸಿದ್ದಾರೆ. ಅನುಭೋಗಿಗಳು ಅಥವಾ ಉಳಿತಾಯಗಾರರು ಆರ್ಥಿಕ ವ್ಯವಸ್ಥೆಯ ಸಕ್ರಿಯ ಮೂಲಾಂಶಗಳಾಗಿರದೇ ಹೂಡಿಕೆದಾರರೇ ಆ ಮೂಲಾಂಶಗಳಾಗಿದ್ದಾರೆ. ಯಾರೇ ಹೂಡಿಕೆ ಮಾಡಿದರೆ ಇದರಿಂದ ಹೆಚ್ಚು ಬಂಡವಾಳ ಸರಕುಗಳ ಸೃಷ್ಟಿಯಾಗುತ್ತದೆ. ಹೀಗಾಗಿ ಉತ್ಪಾದನಾ ಸಾಮರ್ಥ್ಯ ಹೆಚ್ಚಾಗುತ್ತದೆ. ಇದರಿಂದಾಗಿ ಭವಿಷ್ಯದಲ್ಲಿ ರಾಷ್ಟ್ರದ ಉತ್ಪಾದನೆ ಹೆಚ್ಚಾಗುತ್ತದೆ. ನಂತರ ಆ ಉತ್ಪಾದನೆಯು ಮಾರುಕಟ್ಟೆಯಿಂದ ಹೀರಲ್ಪಡುತ್ತದೆ ಹಾಗೂ ಹೆಚ್ಚಿನ ಲಾಭವನ್ನು ನೀಡುತ್ತದೆ ಎನ್ನುವ ಭರವಸೆ ಮೂಡುತ್ತದೆ. ಹೂಡಿಕೆದಾರರು ಅನಿಶ್ಚಿತ ಭವಿಷ್ಯದಲ್ಲಿ ತಮ್ಮದೇ ಹಾದಿಯಲ್ಲಿ ಕಾರ್ಯಾಚರಿಸುತ್ತಾರೆ. ಭವಿಷ್ಯದ ಬಗ್ಗೆ ಹೂಡಿಕೆದಾರರಿಗೆ ನಂಬಲರ್ಹ ಮಾಹಿತಿ ದೊರೆಯುವುದಿಲ್ಲವಾದ್ದರಿಂದ ಭವಿಷ್ಯದ ಆರ್ಥಿಕ ಸನ್ನಿವೇಶದ ಬಗ್ಗೆ ದೀರ್ಘಾವಧಿ ನಿರೀಕ್ಷೆಯ ಮೇಲೆ ಹೂಡಿಕೆ ಮಾಡಲು ನಿರ್ಧಾರ ಮಾಡುತ್ತಾರೆ. ಅವರು ಆಶಾವಾದಿಗಳಾಗಿದ್ದಾರೋ ಅಥವಾ ನಿರಾಶವಾದಿಗಳಾಗಿದ್ದಾರೋ ಎನ್ನುವುದನ್ನು ಅವಲಂಬಿಸಿ ಅವರು ಹೆಚ್ಚು ಅಥವಾ ಕಡಿಮೆ ಹೂಡಿಕೆ ಮಾಡುತ್ತಾರೆ(ಹೂಡಿಕೆದಾರರ ಭಾವನೆಗಳು ಮತ್ತು ಪ್ರವೃತ್ತಿಗಳನ್ನು ಕೇನ್ಸ್ "ಅನಿಮಲ್ ಸ್ಪಿರಿಟ್ಸ್(ಮೊಂಡು ಪ್ರವೃತ್ತಿ)" ಎಂದು ವಿವರಿಸಿದ್ದಾರೆ).

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ; ಆರ್ಥಿಕತೆಯ ವಾಸ್ತವಿಕ ಸ್ಥಿತಿಯನ್ನು ವಿವರಿಸುವ ಆರ್ಥಿಕತೆಯ ಪರಿಮಾಣ (ರಾಷ್ಟ್ರೀಯ ಆದಾಯ)ದ ಆಧಾರದ ಮೇಲೆ ಅನುಭೋಗ ವೆಚ್ಚ ನಿರ್ಧಾರವಾಗುತ್ತದೆ. ಹೂಡಿಕೆ ವೆಚ್ಚವು ಮುಖ್ಯವಾಗಿ ಖಚಿತವಾಗದಿರುವ ಪರಿಮಾಣವನ್ನು ಅವಲಂಬಿಸಿದೆ; ಹೂಡಿಕೆದಾರರಿಗೆ ತಮ್ಮ ಹೂಡಿಕೆ ಲಾಭದಾಯಕವೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಯಾವುದೇ ಖಾತರಿ ಇರದ ಅನಿಶ್ಚಿತ ಪರಿಮಾಣ ಅದು. ಅವರು ಭವಿಷ್ಯದಲ್ಲಿ ಸರಕುಗಳ ಬೆಲೆಗಳನ್ನು, ಕೆಲಸಗಾರರಿಗೆ ಅವರು ನೀಡಬೇಕಾದ ವೇತನ ದರವನ್ನು, ತಾಂತ್ರಿಕ ಜ್ಞಾನದಲ್ಲಿ ಆಗಿರುವ ಹೆಚ್ಚಳದಿಂದಾಗಿ ತಮ್ಮ ಹೂಡಿಕೆ ತಾಂತ್ರಿಕವಾಗಿ ಹಳೆಯದಾಗಿದೆಯೇ? ಎಂಬ ಬಗ್ಗೆ ಅವರಿಗೆ ಖಚಿತತೆ ಇರುವುದಿಲ್ಲ. ಅಷ್ಟೇ ಅಲ್ಲ; ಸಾಧ್ಯಾಸಾಧ್ಯತೆಯ ಲೆಕ್ಕಾಚಾರದ ಮೇಲೆ ಕೂಡ ತಮ್ಮ ನಿರ್ಧಾರಗಳನ್ನು ಕೈಗೊಳ್ಳಲಾಗದ ಸ್ಥಿತಿ ಹೂಡಿಕೆದಾರರದ್ದಾಗಿರುತ್ತದೆ. ಏಕೆಂದರೆ ಹೂಡಿಕೆ ಚಟುವಟಿಕೆ ವಿಭಿನ್ನ ಪ್ರತಿಫಲಗಳ

ಸಂಭವನೀಯತೆಗಳು ಕೂಡ ಅವರಿಗೆ ತಿಳಿದಿರುವುದಿಲ್ಲ. ಪ್ರಾಂಕ್‌ನೈಟ್‌ಸೂಚಿಸುವಂತೆ ಹೂಡಿಕೆದಾರರು ಕೇವಲ ಗಂಡಾಂತರಗಳನ್ನು ಎದುರಿಸುವುದಲ್ಲದೇ ಮೂಲಭೂತ ಅನಿಶ್ಚಿತತೆಯನ್ನು ಕೂಡ ಎದುರಿಸುತ್ತಾರೆ. ಹಾಗಾಗಿ ಅವರು ದೀರ್ಘಕಾಲೀನ ಲಾಭದ ನಿರೀಕ್ಷೆಯ ಆಧಾರದ ಮೇಲೆ ತಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಗುಣಕ

ಲಾಭದಾಯಕತೆಯ ಬಗ್ಗೆ ಹೂಡಿಕೆದಾರರ ದೀರ್ಘಾವಧಿಯ ನಿರೀಕ್ಷೆಗಳ ಅಭಿವ್ಯಕ್ತಿಯಾಗಿ 10 ಶತಕೋಟಿ ಡಾಲರ್‌ನಷ್ಟು ಸಮಗ್ರ ಹೂಡಿಕೆ ಬೇಡಿಕೆ (I) ಇದೆ ಎಂದು ಭಾವಿಸಿಕೊಳ್ಳೋಣ. ಈ ಬೇಡಿಕೆಯು ಹೂಡಿಕೆ ಸರಕುಗಳನ್ನು (ಯಂತ್ರಗಳು, ಉಪಕರಣಗಳು, ಕಟ್ಟಡ ಇತ್ಯಾದಿ) ಉತ್ಪಾದಿಸುವ ಉದ್ಯಮಗಳಲ್ಲಿ 10 ಶತಕೋಟಿ ಡಾಲರ್‌ನಷ್ಟು ಆದಾಯಕ್ಕೆ ಕಾರಣವಾಗುತ್ತದೆ. ಈ ಆದಾಯದಲ್ಲಿ ಶೇಕಡ 20ರಷ್ಟು (2 ಶತಕೋಟಿ ಡಾಲರ್) ಉಳಿತಾಯ. ಉಳಿದ ಶೇಕಡ 80ರಷ್ಟು(8 ಶತಕೋಟಿ ಡಾಲರ್) ಆದಾಯವನ್ನು ಪಡೆದವರು(ಕಾರ್ಮಿಕರು, ಬಂಡವಾಳಶಾಹಿಗಳು ಇತ್ಯಾದಿ) ಅನುಭೋಗಿ ಸರಕುಗಳನ್ನು ಕೊಂಡುಕೊಳ್ಳಲು ಅದನ್ನು ಬಳಸುತ್ತಾರೆ. ಆದ್ದರಿಂದ ನಾವು ಅನುಭೋಗಿ ಸರಕುಗಳನ್ನು ಉತ್ಪಾದಿಸುವ ಕೈಗಾರಿಕೆಗಳಲ್ಲಿ (ಆಹಾರ, ಪಾನೀಯಗಳು ಕಾರುಗಳು ಇತ್ಯಾದಿ) 8 ಶತಕೋಟಿ ಡಾಲರ್‌ನಷ್ಟು ಆದಾಯವನ್ನು ಪಡೆದುಕೊಳ್ಳುತ್ತೇವೆ ಎಂದು ಹೇಳಬಹುದು. ಈ ಆದಾಯದಲ್ಲಿ, ಮತ್ತೆ ಶೇಕಡ 20ರಷ್ಟು (1.6 ಶತಕೋಟಿ ಡಾಲರ್) ನ್ನು ಉಳಿತಾಯ ಮಾಡಲಾಗುತ್ತದೆ ಹಾಗೂ ಉಳಿದ ಶೇಕಡ 80 ರಷ್ಟು (6.4 ಶತಕೋಟಿ ಡಾಲರ್) ಅನುಭೋಗ ವೆಚ್ಚವಾಗುತ್ತದೆ. ಇದು ಅನುಭೋಗಿ ಸರಕುಗಳಿಗಿರುವ ಹೆಚ್ಚುವರಿ ಬೇಡಿಕೆಗೆ ಕಾರಣವಾಗುತ್ತದೆ. ಆದ್ದರಿಂದ ಇದು ಹೆಚ್ಚುವರಿ ಆದಾಯ, ವೆಚ್ಚ ಇತ್ಯಾದಿಗಳಿಗೆ ಕಾರಣವಾಗುತ್ತದೆ. ಹೂಡಿಕೆ ಬೇಡಿಕೆಯು ಆದಾಯ ಸೃಷ್ಟಿ ಮತ್ತು ವೆಚ್ಚದ ನಿರಂತರ ಪ್ರಕ್ರಿಯೆಗೆ ಪ್ರಚೋದನೆ ನೀಡುತ್ತದೆ. ಇದು ಅಂತಿಮವಾಗಿ ರಾಷ್ಟ್ರೀಯ ಆದಾಯಕ್ಕೆ ಕಾರಣವಾಗುತ್ತದೆ (10 ಶತಕೋಟಿ ಡಾಲರ್+ 8 ಶತಕೋಟಿ ಡಾಲರ್+ 6.4 ಶತಕೋಟಿ ಡಾಲರ್+ 5.12 ಶತಕೋಟಿ ಡಾಲರ್ + ...). ಹೂಡಿಕೆ ಮಾಡಲಾದ 10 ಶತಕೋಟಿ ಡಾಲರಿನಲ್ಲಿ ಉಳಿತಾಯ (2 ಶತಕೋಟಿ ಡಾಲರ್+ 1.6 ಶತಕೋಟಿ ಡಾಲರ್+ 1.28 ಶತಕೋಟಿ ಡಾಲರ್+ 1.024 ಶತಕೋಟಿ ಡಾಲರ್+ ......) ಉಳಿತಾಯವಾಗುತ್ತದೆ. ಉಳಿತಾಯ s=0.2 ಆಗಿರುವಾಗ ರಾಷ್ಟ್ರೀಯ ಆದಾಯವು 50 ಶತಕೋಟಿ ಡಾಲರ್‌ಗಳಿಗೆ ಸಮನಾಗುತ್ತದೆ.

ಸಾಮಾನ್ಯವಾಗಿ $Y = (I/s)\ I$

ಇಲ್ಲಿ I/s ಅಭಿವ್ಯಕ್ತಿಯು ಗುಣಕವಾಗಿದೆ. ಮೇಲಿನ ಉದಾಹರಣೆಯಲ್ಲಿ ಗುಣಕವು 5 ಆಗಿದೆ. ಕೇನ್ಸ್ ಈ ಪರಿಭಾಷೆಯನ್ನು ರಿಚರ್ಡ್ ಕಾನ್ ಅವರಿಂದ ಎರವಲಾಗಿ ಪಡೆದಿದ್ದಾರೆ. ರಿಚರ್ಡ್ ಕಾನ್ ಅವರು 'ಕೇಂಬ್ರಿಡ್ಜ್ ಸರ್ಕಸ್' ಗುಂಪಿನ ಸದಸ್ಯರಾಗಿದ್ದು, ಕೇನ್ಸ್‌ನ ಹಣ ಮತ್ತು ಸಾಮಾನ್ಯ ಸಿದ್ಧಾಂತದ ಕುರಿತ ಗ್ರಂಥವನ್ನು ರಚಿಸುವಾಗ ವಿಮರ್ಶಾತ್ಮಕ ಸಲಹೆಯೊಂದಿಗೆ ಆ ಗುಂಪು ಅವರನ್ನು ಬೆಂಬಲಿಸಿತು (ಈ ಅಭಿವ್ಯಕ್ತಿಯು ಹಳೆಯದಾಗಿದ್ದು ಇದನ್ನು 18ನೇ ಶತಮಾನದ ಫಿಜಿಯೋಕ್ರೇಟರು(ಕೃಷಿಯೇ ಆರ್ಥಿಕತೆಯ ಆಧಾರ ಎಂದು ಪ್ರತಿಪಾದಿಸಿದ ಅರ್ಥಶಾಸ್ತ್ರಜ್ಞರು) ಮೊದಲು ಬಳಸಿದ್ದಾರೆ). ಗುಣಕವು ಒಂದು ನಿರ್ದಿಷ್ಟ ಮಟ್ಟದ ಹೂಡಿಕೆ ಮತ್ತು ಪರಿಣಾಮಕಾರಿ ಸಮಗ್ರ ಬೇಡಿಕೆಗೆ ಅನುಗುಣವಾದ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುತ್ತದೆ. ಸಮಗ್ರ ಪರಿಮಾಣಗಳಿಗೆ ಯಾವುದು ಅನ್ವಯವಾಗುತ್ತದೆಯೇ ಅದು ಪರಿಮಾಣದಲ್ಲಿನ ಬದಲಾವಣೆಗಳಿಗೂ ಅನ್ವಯವಾಗುತ್ತದೆ(Δದಿಂದ ಇದನ್ನು ಸೂಚಿಸಲಾಗುತ್ತದೆ). ನಾವೀಗ ಒಂದು ಶತಕೋಟಿ ಡಾಲರ್ ನಷ್ಟು (Δ.I= ಒಂದು ಶತಕೋಟಿ ಡಾಲರ್) ಹೂಡಿಕೆಯಾಗಿದೆ ಎಂದು ಕೊಳ್ಳೋಣ. ಇದು ನಂತರ ರಾಷ್ಟ್ರೀಯ ಆದಾಯದಲ್ಲಿ 5 ಶತಕೋಟಿ ಡಾಲರ್‌ನಷ್ಟು ಹೆಚ್ಚಳವನ್ನು ಹಾಗೂ ಹೆಚ್ಚುವರಿ ಹೂಡಿಕೆ ಮಟ್ಟದಲ್ಲಿ ಹೆಚ್ಚುವರಿ ಉಳಿತಾಯವನ್ನು ಉಂಟು ಮಾಡುತ್ತದೆ ($\Delta S = s\, \Delta Y = \Delta I = 1$ ಶತಕೋಟಿ ಡಾಲರ್) ಒಂದು ವೇಳೆ ಹೂಡಿಕೆ ಚಟುವಟಿಕೆಗಳು ಏರಿಳಿತಕ್ಕೊಳಪಟ್ಟರೆ ನಂತರ ರಾಷ್ಟ್ರೀಯ ಆದಾಯ, ಅನುಭೋಗ

ಮತ್ತು ಉಳಿತಾಯಗಳೂ ಏರಿಳಿತಕ್ಕೊಳಪಡುತ್ತವೆ. ವ್ಯಾಪಾರ ಆವರ್ತಗಳು ಹೂಡಿಕೆ ಚಟುವಟಿಕೆಯಲ್ಲಿನ ಏರಿಳಿತಗಳೊಂದಿಗೆ ನಿಕಟ ಸಂಬಧ ಹೊಂದಿವೆ. ಕೇನ್ಸ್ ಅವರ ಬಹಳ ಮುಖ್ಯವಾದ ಸಂದೇಶವೆಂದರೆ, **ಹೂಡಿಕೆಯನ್ನು ನಿರ್ಧರಿಸುವುದು ಉಳಿತಾಯವಲ್ಲ; ಬದಲಾಗಿ ಹೂಡಿಕೆಯೇ ಉಳಿತಾಯವನ್ನು ನಿರ್ಧರಿಸುತ್ತದೆ.** ಉಳಿತಾಯಗಾರರು ಘಟನೆಗಳ ಗತಿಯನ್ನು ನಿರ್ಧರಿಸುವುದಿಲ್ಲ; ಆದರೆ ಹೂಡಿಕೆದಾರರು ಅದನ್ನು ನಿರ್ಧರಿಸುತ್ತಾರೆ. ಇದರಿಂದ ವ್ಯಕ್ತವಾಗುವ ಆರ್ಥಿಕ ನೀತಿಯ ತೀರ್ಮಾನವೆಂದರೆ; ಸಮಗ್ರ ಹೂಡಿಕೆಯನ್ನು ರಾಷ್ಟ್ರೀಯ ಆದಾಯದ ಪೂರ್ಣೋದ್ಯೋಗ ಮಟ್ಟದಲ್ಲಿ ಪಡೆಯುವ ಉಳಿತಾಯಕ್ಕೆ ಸಮನಾದ ಮಟ್ಟದಲ್ಲಿ ಸ್ಥಿರಗೊಳಿಸಬೇಕು ಎನ್ನುವುದಾಗಿದೆ.

ಬಡ್ಡಿ, ಹಣ ಮತ್ತು ಉದ್ಯೋಗ

ಮೇಲಿನ ವಾದವು ಹೂಡಿಕೆ ಮತ್ತು ಉಳಿತಾಯದ ನಡುವಿನ ಸಂಬಂಧದ ಬಗ್ಗೆ ಕೇನ್ಸ್‌ನ ತಾರ್ಕಿಕತೆಯ ತಿರುಳನ್ನು ಹೊಂದಿದೆ ಹಾಗೂ ಅವರು ಸ್ವೀಕರಿಸಿದ ನಿಯೋ-ಕ್ಲಾಸಿಕಲ್ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಅವರ ವಿನೂತನ ಕೊಡುಗೆ ಈ ವಾದ. 'ಒಪ್ಪಿತ ಆಲೋಚನಾ, ವಿಧಾನ'ದಿಂದ ತಪ್ಪಿಸಿಕೊಳ್ಳುವ ಕಷ್ಟವನ್ನು ಕೇನ್ಸ್ ಪದೇ ಪದೇ ನಿರಾಕರಿಸಿದರು ಮತ್ತು ಅವರ ಹೂಡಿಕೆ ಬೇಡಿಕೆ ನಿರ್ಧಾರಕಗಳ ಪರಿಭಾವನೆಯು ಇದಕ್ಕೆ ಉದಾಹರಣೆಯಾಗಿದೆ. ದೀರ್ಘಾವಧಿ ಲಾಭದಾಯಕತೆಯ ನಿರೀಕ್ಷೆಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳುವಾಗ ಅವರು, ಹಣದ ಬಡ್ಡಿಯ ದರವು ಸ್ವಲ್ಪ ಪ್ರಭಾವವನ್ನು ಬೀರುತ್ತದೆ ಎನ್ನುವುದನ್ನು ಗಮನಿಸಿದ್ದಾರೆ. ಈ ಹಿಂದಿನ ಲಾಭದಿಂದಲೇ ತಮ್ಮ ಎಲ್ಲಾ ಹೂಡಿಕೆಗಳಿಗೆ ಹಣಕಾಸು ಒದಗಿಸಲು ಸಾಧ್ಯವಾಗದ ಉದ್ದಿಮೆಗಳಿಗೆ ಹೆಚ್ಚುವರಿ ದ್ರವ್ಯತೆಯ ಅವಶ್ಯಕತೆ ಇರುತ್ತದೆ. ಇದನ್ನು ಪಡೆಯುವ ಒಂದು ಮಾರ್ಗವೆಂದರೆ ಬ್ಯಾಂಕಿನಿಂದ ಸಾಲವನ್ನು ಪಡೆಯುವುದು. ಬ್ಯಾಂಕ್‌ವಿಧಿಸುವ ಬಡ್ಡಿಯು ಉದ್ಯಮದ ವೆಚ್ಚವಾಗಿದ್ದು, ಅದರಿಂದಾಗಿ ಉದ್ಯಮ ಗಳಿಸುವ ಲಾಭದ ಪ್ರಮಾಣ ಕಡಿಮೆಯಾಗುತ್ತದೆ. (ಇಲ್ಲಿ ಮತ್ತೊಂದು ಪರಿಗಣನೆ ಇದೆ. ಲಾಭವನ್ನು ಹೊಂದಿರುವ ಉದ್ಯಮವು ಇತರ ವಿಷಯಗಳ ಜೊತೆಗೆ ಅದರ ಉತ್ಪಾದನಾ ಸಾಮರ್ಥ್ಯದ ವಿಸ್ತರಣೆಗೆ ಹೂಡಿಕೆ ಮಾಡುವ ಪರ್ಯಾಯವನ್ನು ಎದುರಿಸುತ್ತದೆ ಅಥವಾ ಅದನ್ನು ಬ್ಯಾಂಕಿನಲ್ಲಿಟ್ಟು ಬಡ್ಡಿಯನ್ನು ಗಳಿಸುತ್ತದೆ. ಬಡ್ಡಿಯ ದರ ಅಧಿಕವಾಗಿರುವಾಗ ಹೂಡಿಕೆ ಮಾಡಲು ಉತ್ತೇಜನ ಕಡಿಮೆಯಾಗಿರುತ್ತದೆ.) ಕೇನ್ಸ್ ಈ ಅಂಶವನ್ನು ತನ್ನ ವಿಶ್ಲೇಷಣೆಯಲ್ಲಿ ಸಂಪೂರ್ಣವಾಗಿ ನಿಯೋ-ಕ್ಲಾಸಿಕಲ್ ಸಿದ್ಧಾಂತದ ರೀತಿಯಲ್ಲಿಯೇ ಸಂಯೋಜಿಸಿದ್ದಾರೆ. ಬಡ್ಡಿದರ (i) ಹೆಚ್ಚಾಗಿದ್ದಾಗ ಹೂಡಿಕೆಗಾಗಿ ಹಣಕಾಸು ತೊಡಗಿಸುವಿಕೆ ವೆಚ್ಚ ಹೆಚ್ಚಾಗುತ್ತದೆ ಮತ್ತು ಹೂಡಿಕೆ(I) ಕಡಿಮೆಯಾಗುತ್ತದೆ. ಅದಕ್ಕನುಗುಣವಾಗಿ ಬಡ್ಡಿ ದರವೂ ಕಡಿಮೆಯಾದಂತೆ ಹೂಡಿಕೆ ಪ್ರಮಾಣ ಹೆಚ್ಚಾಗುತ್ತದೆ. ಆದರೆ, ಹೂಡಿಕೆದಾರರು ಕಡಿಮೆ ಬಡ್ಡಿದರಗಳಿಗೆ ಹೂಡಿಕೆ ಚಟುವಟಿಕೆಗಳ ವಿಸ್ತರಣೆಯೊಂದಿಗೆ ಪ್ರತಿಕ್ರಿಯಿಸಿದಾಗ; ಪೂರ್ಣೋದ್ಯೋಗಕ್ಕೆ ಅಗತ್ಯ ಪ್ರಮಾಣದಲ್ಲಿ ಹೂಡಿಕೆ (I) ಹೆಚ್ಚಾದಂತೆ ಬಡ್ಡಿದರ (i) ಕಡಿತವಾಗಬಹುದೆ? ಹಾಗೂ ನಾವು ಆ ಮಟ್ಟದ ಕಡಿತವನ್ನು ಅವಲಂಬಿಸಬಹುದೇ? ಎಂಬುದು ನಿರ್ಣಾಯಕ ಪ್ರಶ್ನೆ.

ಕೇನ್ಸ್ ಪ್ರಕಾರ ಇದು ಸಾಧ್ಯ. ಆದರೆ ತೀರಾ ಅಸಂಭವ. ಇದಕ್ಕೆ ಮುಖ್ಯ ಕಾರಣ ಹೆಚ್ಚಿನ "ದ್ರವ್ಯತೆಯ ಆದ್ಯತೆ"- "ಹಣದ ಮೋಹ"- ಬಡ್ಡಿ ದರವನ್ನು ಅಗತ್ಯವಿರುವಷ್ಟು ಕುಸಿಯದಂತೆ ತಡೆಯುತ್ತದೆ. ಹಣ ಮೂಲಭೂತವಾಗಿ ಎರಡು ಕಾರಣಗಳಿಗಾಗಿ ಅಗತ್ಯವಿದೆ ಎಂದು ಕೇನ್ಸ್ ವಾದಿಸಿದ. ಸರಕುಗಳನ್ನು ಖರೀದಿಸುವಾಗ ಮತ್ತು ಮಾರಾಟ ಮಾಡುವಾಗ ವಿನಿಮಯದ ಮಾಧ್ಯಮವಾಗಿ (ಹಣ ಹೀಗೆ "ವ್ಯವಹಾರ ಉದ್ದೇಶ"ಗಳಿಗಾಗಿ ಅಗತ್ಯವಿದೆ) ಮತ್ತು ಭವಿಷ್ಯದ ಅನಿಶ್ಚತತೆಯನ್ನು ಎದುರಿಸಲು ಮೌಲ್ಯ ದಾಸ್ತಾನಾಗಿ ("ನಿರೀಕ್ಷೆಯ ಉದ್ದೇಶ"ಗಳಿಗಾಗಿ ಹಣವನ್ನು ಕೂಡಿಡಲಾಗುತ್ತದೆ). ಇದು ಏಜೆಂಟರಿಗೆ ಹಣವನ್ನು ಆಕರ್ಷಕವಾಗಿಸುತ್ತದೆ. ಆದಾಗ್ಯೂ ಒಂದು ವೇಳೆ ದ್ರವ್ಯತೆಯ ಆದ್ಯತೆ ಹೆಚ್ಚಾಗಿದ್ದಾಗ ಅದನ್ನು ಬಿಟ್ಟು ಕೊಡಲು

ನೀಡುವ ಬೆಲೆಯು ಹೆಚ್ಚಾಗುತ್ತದೆ ಮತ್ತು ಈ ಬೆಲೆಯು ಹಣದ ಬಡ್ಡಿ ದರವಲ್ಲದೇ ಮತ್ತೇನೂ ಅಲ್ಲ.

ನಿಯೋ- ಕ್ಲಾಸಿಕಲ್ ಸಿದ್ಧಾಂತಕ್ಕೆ ಹೋಲಿಸಿದರೆ ಇದು ಕೇನ್ಸ್ ಸಿದ್ಧಾಂತದ ಮತ್ತೊಂದು ವಿಶಿಷ್ಟ ಲಕ್ಷಣವಾಗಿದೆ. ನಿಯೋ ಕ್ಲಾಸಿಕ್ ಸಿದ್ಧಾಂತದಲ್ಲಿ ಬಡ್ಡಿದರವು ಉಳಿತಾಯ ಮತ್ತು ಹೂಡಿಕೆಗಳ (ಪೂರ್ಣೋದ್ಯೋಗ) ಸಮತೋಲನವನ್ನು ನಿರ್ಧರಿಸುವ ಪರಿಮಾಣ ಎಂದು ಹೇಳಲಾಗುತ್ತದೆ. ಕೇನ್ಸ್ ವಾದದ ಪ್ರಕಾರ, ಹಣ ಅಥವಾ ದ್ರವ್ಯತೆಯ ಬೇಡಿಕೆ ಮತ್ತು ಪೂರೈಕೆಯ ಸಮತೋಲನವನ್ನು ಅದು ನಿರ್ಧರಿಸುತ್ತದೆ. ಕೇನ್ಸ್‌ನ ವಾದದ ಸಾರಾಂಶವೆಂದರೆ; ಒಂದು ವೇಳೆ ದ್ರವ್ಯತೆಯ ಒಲವು ಅಧಿಕವಾಗಿದ್ದರೆ ಸಮಾಜ ಶ್ರೀಮಂತವಾಗುತ್ತಾ ಹೋಗುತ್ತದೆ. ಹೀಗಾಗಿ ಜನರ ದ್ರವ್ಯತೆಯ ಒಲವು ಕೂಡಾ ಹೆಚ್ಚುತ್ತಾ ಹೋಗುತ್ತದೆ. ಹಣ ಅಥವಾ ದ್ರವ್ಯತೆಯ ಬೇಡಿಕೆ ಮತ್ತು ಪೂರೈಕೆಗಳು ಸಮತೋಲನದಲ್ಲಿರುತ್ತವೆ. ಶ್ರಮದ ಪೂರ್ಣೋದ್ಯೋಗ ನೀಡುವ ಹೂಡಿಕೆ ಗಾತ್ರಕ್ಕೆ ಅನುಗುಣವಾಗಿ ಬಡ್ಡಿದರ ಕುಸಿಯುವುದಿಲ್ಲ ಎಂದು ನಿರೀಕ್ಷಿಸಲಾಗಿದೆ.

ನಿಯೋ-ಕ್ಲಾಸಿಕಲ್ ಮತ್ತು ಕೇನ್ಸ್ ಅರ್ಥಶಾಸ್ತ್ರದ ನಡುವಿನ ಮೂರನೇ ವ್ಯತ್ಯಾಸ ಇದಾಗಿದೆ. ನಿಯೋ-ಕ್ಲಾಸಿಕಲ್ ಅರ್ಥಶಾಸ್ತ್ರದಲ್ಲಿ ಹಣವು ಪ್ರಾಥಮಿಕವಾಗಿ ಮೌಲ್ಯ ಸಂಗ್ರಹಣೆಯ ಸಾಧನವಾಗದೆ, ಕೇವಲ ವಿನಿಮಯ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ನೈಜ ಆರ್ಥಿಕತೆಯ ಮೇಲೆ ಗಮನಾರ್ಹ ಪರಿಣಾಮಗಳನ್ನು ಬೀರುವುದಿಲ್ಲ. ಆದ್ದರಿಂದ ಹಣವು ನೈಜ ವ್ಯವಸ್ಥೆಯನ್ನು ಆವರಿಸುವ 'ಮುಸುಕು' ಎಂದು ಕರೆಯಲಾಗುತ್ತದೆ. ಅದನ್ನು ವ್ಯವಸ್ಥೆಯ ಮೇಲೆ ಹೆಚ್ಚು ಪರಿಣಾಮ ಬೀರದಂತೆ ತೆಗೆದುಹಾಕಬಹುದು. ಆದರೆ, ಕೇನ್ಸ್ ವಿಶ್ಲೇಷಣೆಯು ವಿಭಿನ್ನವಾಗಿದ್ದು ನೈಜ ಆರ್ಥಿಕತೆ ಮತ್ತು ಹಣಕಾಸು ಕಾರ್ಯಕ್ಷೇತ್ರ ನಿಕಟವಾಗಿ ಹೆಣೆದು ಕೊಂಡಿವೆ. ಕೇನ್ಸ್ ಪ್ರಕಾರ ಎರಡು ಕಾರ್ಯ ಕ್ಷೇತ್ರಗಳ ಪರಸ್ಪರ ಅವಲಂಬನೆಯ ಮೂಲ ಹಣವು ಮೌಲ್ಯ ಸಂಗ್ರಹಣೆಯ ಸಾಧನವಾಗಿಯೂ ಬಳಕೆ ಯಾಗುವುದು. ಒಂದು ನಿರ್ದಿಷ್ಟ ಐತಿಹಾಸಿಕ ಸನ್ನಿವೇಶದಲ್ಲಿ ಈ ಪಾತ್ರ ನಿಸ್ಸಂಶಯವಾಗಿ ಹೆಚ್ಚು ಮುಖ್ಯವಾಗಿದ್ದರೆ; ಏಜೆಂಟರು ಹೆಚ್ಚು ನಗದು ಶಿಲ್ಕನ್ನು (ಅವರು ಹಣವನ್ನು ಸಂಗ್ರಹಿಸಿಡುತ್ತಾರೆ) ಹೊಂದಿರುತ್ತಾರೆ. ಅಂದರೆ ವೆಚ್ಚಗಳು ಕಡಿಮೆಯಾಗುತ್ತವೆ. ಇದು ನೈಜ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತದೆ. ಏಕೆಂದರೆ ಉದ್ಯಮಗಳು ಆಗ ಕಡಿಮೆ ಮಾರಾಟ ಮಾಡುತ್ತವೆ. ಪರಿಣಾಮವಾಗಿ ಕೆಲವು ಕೆಲಸಗಾರರನ್ನು ಕೆಲಸದಿಂದ ವಜಾ ಮಾಡುತ್ತಾರೆ.

ಕೇನ್ಸ್ ಅಭಿಪ್ರಾಯದಲ್ಲಿ ಹಣವನ್ನು ನಗದು ರೂಪದಲ್ಲಿರಿಸಿಕೊಳ್ಳುವುದು ಜಾಣ ನಿರ್ಧಾರವಾಗಬಹುದು. 'ಕನ್‌ಸಲ್' ಎಂಬ ವಿಶೇಷ ಹೂಡಿಕೆ ಬಾಂಡ್‌ಗಳನ್ನು ಉದಾಹರಣೆಯಾಗಿಸಿಕೊಂಡು ಕೇನ್ಸ್ ಇದನ್ನು ವಿವರಿಸುತ್ತಾರೆ. ಈ ಕನ್‌ಸಲ್ ಎಂಬುದು ನಿರಂತರವಾಗಿ ಪ್ರತಿ ವರ್ಷವೂ ಒಂದು ನಿಶ್ಚಿತ ಬಡ್ಡಿಯನ್ನು ನೀಡುವ ಅನಿಯಮಿತ ಅವಧಿಯ ಸರ್ಕಾರಿ ಬಾಂಡ್. ಈ ಬಾಂಡನ್ನು ಯಾರು ಖರೀದಿಸುತ್ತಾರೋ ಅವರಿಗೆ ಅನಿರ್ದಿಷ್ಟ ಅವಧಿಯವರೆಗೆ ಪ್ರತಿ ವರ್ಷ ಒಂದು ನಿಗದಿತ ಮೊತ್ತದ(ಉದಾಹರಣೆಗೆ 100 ಡಾಲರ್ ಎಂದಿಟ್ಟುಕೊಳ್ಳೋಣ) ಬಡ್ಡಿ ಲಭಿಸುತ್ತಿರುತ್ತದೆ. ವಾರ್ಷಿಕ ಬಡ್ಡಿಯ ಮೊತ್ತ ಸ್ಥಿರವಾಗಿರುವಾಗಿದ್ದು, ವಹಿವಾಟು ನಡೆಸಬಹುದಾದ ಈ ಸೆಕ್ಯುರಿಟಿಯ ಮೌಲ್ಯ ಅಸ್ಥಿರವಾಗಿರುತ್ತದೆ. ಅದರ ಬೆಲೆ ಹೆಚ್ಚಾದಂತೆ ಸೆಕ್ಯೂರಿಟಿಗೆ ಅನ್ವಯಿಸುವ ಬಡ್ಡಿದರ ಕಡಿಮೆಯಾಗುತ್ತದೆ. ಇದು ಆಸ್ತಿಯ ಬೆಲೆಗೆ ಸ್ಥಿರ ಬಡ್ಡಿ ಪಾವತಿಯ ಅನುಪಾತಕ್ಕೆ ಸಮನಾಗಿ ಬದಲಾಗುತ್ತಿರುತ್ತದೆ. ಒಂದು ವೇಳೆ ಬೆಲೆ ಅಸಹಜ ಪ್ರಮಾಣದಲ್ಲಿ ಹೆಚ್ಚಾದರೆ ಅನೇಕ ಹಣಕಾಸು ಹೂಡಿಕೆದಾರರು ಬಡ್ಡಿ ಕಡಿಮೆಯಾಗುತ್ತದೆ ಎಂದು ನಿರೀಕ್ಷಿಸುತ್ತಾರೆ. ಇದು ಅವರಿಗೆ ಸಂಭವನೀಯ ನಷ್ಟವನ್ನು ಸೂಚಿಸುತ್ತದೆ. ಒಂದು ವೇಳೆ ಆಸ್ತಿಯ ಬೆಲೆಯಲ್ಲಿ ನಿರೀಕ್ಷಿತ ಕುಸಿತದಿಂದ ಉಂಟಾಗುವ ನಷ್ಟವು ವಾರ್ಷಿಕವಾಗಿ ಗಳಿಸುವ ಬಡ್ಡಿಗಿಂತ ಅಧಿಕವಾಗಿದ್ದರೆ ಅವರು ಆಸ್ತಿಯ ಬದಲಿಗೆ ಹಣವನ್ನೇ ಇಟ್ಟುಕೊಳ್ಳಲು ಬಯಸುತ್ತಾರೆ. ಕೇಂದ್ರ ಬ್ಯಾಂಕಿನ ಒಟ್ಟಾರೆ ಹಣ ಪೂರೈಕೆಯು ನಿಗದಿತವಾಗಿದ್ದಾಗ ಹಣದ ಸಮಗ್ರ ಬೇಡಿಕೆಯು ಎಷ್ಟು ಅಧಿಕವಾಗಿರುತ್ತದೆ ಎಂದರೆ ಪೂರ್ಣೋದ್ಯೋಗ ಹೂಡಿಕೆ ದರಕ್ಕಿಂತ ಹಣದ ಬಡ್ಡಿದರ

ಅಧಿಕವಾಗಿರಬಹುದು. ಆಗ ವ್ಯವಸ್ಥೆಯು 'ನಿರುದ್ಯೋಗದ ಸಮತೋಲನ'ದಲ್ಲಿ ಸಿಲುಕಿ ಕೊಳ್ಳುತ್ತದೆ.

ಹೆಚ್ಚು ಅಭಿವೃದ್ಧಿ ಹೊಂದಿದ ಶ್ರೀಮಂತ ಆರ್ಥಿಕತೆಗಳಲ್ಲಿ ಇದು ಸಾಮಾನ್ಯ ಸ್ಥಿತಿಯಾಗಿರುತ್ತದೆ ಎನ್ನುವುದು ಕೇನ್ಸ್‌ಗೆ ಖಚಿತ ಅಭಿಪ್ರಾಯವಾಗಿದೆ. ಅದಕ್ಕೆ ಪೂರಕವಾಗಿ ಅವರು ಮೂರು ಕಾರಣಗಳನ್ನು ಪಟ್ಟಿಮಾಡಿದ್ದಾರೆ. ಮೊದಲನೆಯ ಕಾರಣ; "ಮೂಲಭೂತ ಮಾನಸಿಕ ನಿಯಮ"ಕ್ಕೆ ಅನುಗುಣವಾಗಿ ಉಳಿತಾಯವು (ಈ ಮೊದಲು ಸರಳತೆಯ ಉದ್ದೇಶದಿಂದ ಕಲ್ಪಿಸಿಕೊಂಡಂತೆ) ಆದಾಯದ ಪ್ರಮಾಣಕ್ಕನುಗುಣವಾಗಿ ಹೆಚ್ಚಾಗುವುದಿಲ್ಲ. ಆದರೆ ಪ್ರಮಾಣಾನುಗುಣಕ್ಕಿಂತ ಅಧಿಕವಾಗಿ ಹೆಚ್ಚಾಗುತ್ತದೆ. ಉಳಿತಾಯ ಪ್ರವೃತ್ತಿ (s) ಯು ತಲಾ ಆದಾಯದ ಏರಿಕೆಯೊಂದಿಗೆ ಹೆಚ್ಚಾಗುತ್ತದೆ. ಆದ್ದರಿಂದ ಪರಿಣಾಮಕಾರಿ ಬೇಡಿಕೆಯ ಸಂಭವನೀಯ ಕೊರತೆಯು ಹೆಚ್ಚುತ್ತಾ ಹೋಗುತ್ತದೆ. (ಈ ಪ್ರವೃತ್ತಿಯು ಕೇನ್ಸ್ ಮತ್ತು ವಿಶೇಷವಾಗಿ ನಿಕೋಲಸ್ ಕಾಲ್ಡಾರ್ (1908-1986) ವಾದಿಸಿದಂತೆ, ವೇತನದಿಂದ ಲಾಭಕ್ಕೆ ಮರು ವಿತರಣೆಯಿಂದ ವರ್ಧಿಸುತ್ತದೆ. ಏಕೆಂದರೆ ಲಾಭದಿಂದ ಆಗುವ ಉಳಿತಾಯ ಪ್ರವೃತ್ತಿಯು ವೇತನದಿಂದಾಗುವ ಉಳಿತಾಯ ಪ್ರವೃತ್ತಿಗಿಂತ ಹೆಚ್ಚಾಗಿರುತ್ತದೆ. ಇಂಥ ಪುನರ್ವಿತರಣೆ ಇತ್ತೀಚಿನ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ನಡೆದಿರುವುದನ್ನು ಟೋನಿ ಆಟ್ಕಿನ್ಸನ್ ಮತ್ತು ಥಾಮಸ್ ಪಿಕೆಟ್ಟಿ ಮುಂತಾದವರು ತಮ್ಮ ಅಧ್ಯಯನಗಳಲ್ಲಿ ದಾಖಲಿಸಿದ್ದಾರೆ).

ಎರಡನೆಯದಾಗಿ; ಮತ್ತು ಏಕಕಾಲಿಕವಾಗಿ ಸಾಂಪ್ರದಾಯಿಕ ನಿಯೋ-ಕ್ಲಾಸಿಕಲ್ ಅರ್ಥಶಾಸ್ತ್ರದ ಹೆಜ್ಜೆಗಳನ್ನು ಅನುಸರಿಸಿದ ಕೇನ್ಸ್, ನೈಜ ಬಂಡವಾಳ ಸಂಚಯನಕ್ಕೆ ಸಂಬಂಧಿಸಿದಂತೆ ಲಾಭದ ನಿರೀಕ್ಷೆಗಳು ಕುಸಿಯುತ್ತವೆ ಎನ್ನುವುದನ್ನು ಮನಗಂಡರು. ಒಂದು ನಿರ್ದಿಷ್ಟ ದೇಶದಲ್ಲಿ ಬಂಡವಾಳದ ದಟ್ಟಣೆ ಹೇರಳವಾಗಿ ಪರಿಣಮಿಸುತ್ತದೆ. ಶ್ರಮಕ್ಕೆ ಹೋಲಿಸಿದರೆ ಬಂಡವಾಳ ಕಡಿಮೆ ವಿರಳವಾಗಿರುತ್ತದೆ. ಪರಿಣಾಮವಾಗಿ ನಿರೀಕ್ಷಿತ ಬಂಡವಾಳ ಪ್ರತಿಫಲ ದರ ಕುಸಿಯುತ್ತಾ ಹೋಗುತ್ತದೆ. ಹೀಗಾಗಿ ಹೂಡಿಕೆ ಮಾಡುವ ಪ್ರವೃತ್ತಿ ಕಡಿಮೆಯಾಗುತ್ತದೆ.

ಮೂರನೆಯದು; ಹಣದ ಬಡ್ಡಿದರವು ಸಾಪೇಕ್ಷವಾಗಿ ಜಡವಾಗಿ ಕೆಳಮುಖವಾಗುತ್ತದೆ. ಏಕೆಂದರೆ ಸಾರ್ವಜನಿಕರ ದ್ರವ್ಯತೆಯ ಮೋಹ- ಅವರು ನಗದು ಶಿಲ್ಕನ್ನು ಹೊಂದಲು ಬಯಸುವುದು- ಹೂಡಿಕೆ ಮಾಡುವ ಸಾಮರ್ಥ್ಯ ಸುಧಾರಣೆಗೆ ಪೆಟ್ಟುಕೊಡುತ್ತದೆ. ಅಗತ್ಯ ದ್ರವ್ಯತೆ ಪಡೆಯಲು ಮಾಡುವ ಹೆಚ್ಚಿನ ವೆಚ್ಚವು ಹೂಡಿಕೆಯನ್ನು ತಗ್ಗಿಸುತ್ತದೆ. ಹೀಗಾಗಿ ವ್ಯವಸ್ಥೆಯು ಸಂದಿಗ್ಧತೆಯಲ್ಲಿ ಸಿಲುಕಿಕೊಳ್ಳುತ್ತದೆ. ಹೂಡಿಕೆ ಪ್ರವೃತ್ತಿ ಇಳಿಮುಖವಾಗುತ್ತದೆ. ಆದರೆ ಉಳಿತಾಯ ಪ್ರವೃತ್ತಿಯ ಹೆಚ್ಚಳ ಮತ್ತು ಹಣರೂಪಿ ಬಡ್ಡಿದರ ಅಸಮರ್ಪಕ ಇಳಿಮುಖ ನಮ್ಯತೆಯಿಂದ ಸಂಭವಿಸುವ ಕುಸಿಯುತ್ತಿರುವ ಪ್ರವೃತ್ತಿಯನ್ನು ತಟಸ್ಥಗೊಳಿಸುತ್ತದೆ.

ಅಭಿವೃದ್ಧಿ ಹೊಂದಿದ ಆರ್ಥಿಕತೆಯಲ್ಲಿ ಈ ಮೂರು ಅಂಶಗಳ ಪರಿಣಾಮವಾಗಿ ಬಲವಾದ ಸ್ಥಗಿತತೆ ಪ್ರವೃತ್ತಿ ಜಾರಿಗೆ ಬರುತ್ತದೆ ಎಂದು ಕೇನ್ಸ್ ಅಭಿಪ್ರಾಯ ಪಡುತ್ತಾರೆ. ಅವುಗಳನ್ನು ಕೌಶಲ್ಯ ಪೂರ್ಣ ಹಣಕಾಸು ಮತ್ತು ವಿತ್ತೀಯ ನೀತಿ, ವ್ಯವಹಾರ ನಿರೀಕ್ಷೆಗಳ ಸ್ಥಗಿತತೆ, ಮತ್ತು (ಸಂಕಷ್ಟದ ಪರಿಸ್ಥಿತಿಯಲ್ಲಿ) ಹೂಡಿಕೆ ನಿಯಂತ್ರಣಗಳಿಂದ ನಿವಾರಿಸಬಹುದು.

ಕೇನ್ಸ್‌ನ ಕ್ರಾಂತಿ

ಕೇನ್ಸ್‌ಅವರ ಸಂದೇಶ ಶೈಕ್ಷಣಿಕ ಮತ್ತು ಆರ್ಥಿಕ ನೀತಿಯ ಜಗತ್ತನ್ನು ತ್ವರಿತವಾಗಿ ಜಯಿಸಿತು. ಆಲ್ವಿನ್ ಹಾನ್ಸೆನ್ (1887-1975) ಕೃತಿ ಮತ್ತು ವಿಶೇಷವಾಗಿ ಪಾಲ್ ಎ. ಸ್ಯಾಮುಯೆಲ್ಸನ್ ಅವರ ಪಠ್ಯಪುಸ್ತಕ 'ಏಕನಾಮಿಕ್ಸ್: ಆನ್ ಇಂಟ್ರೋಡಕ್ಟರಿ ಅನಾಲಿಸಿಸ್, 1948 ರಲ್ಲಿ ಮೊದಲ ಬಾರಿಗೆ ಪ್ರಕಟವಾಗಿ ನಂತರ ಹಲವಾರು ಭಾಷೆಗಳಿಗೆ ಅನುವಾದಿಸಲ್ಪಟ್ಟು ಆ ಯಶಸ್ವಿಗೆ ಕಾರಣವಾಯಿತು. 1930 ರ ದಶಕದ ತೀವ್ರ ಆರ್ಥಿಕ ಕುಸಿತ ಮತ್ತು ಬಿಕ್ಕಟ್ಟನ್ನು ನಿವಾರಿಸಲು

ಸಾಂಪ್ರದಾಯಿಕ ಸಿದ್ಧಾಂತದ ಅಸಮರ್ಥತೆಯು ಅರ್ಥಶಾಸ್ತ್ರವು ಆಳವಾದ ಬಿಕ್ಕಟ್ಟಿನಲ್ಲಿದೆ ಎನ್ನುವ ಭಾವನೆಯನ್ನು ಬೆಳೆಸಿತು. ಕೇನ್ಸ್ ಹೆಚ್ಚು ಅಗತ್ಯವಿರುವ ಮರುದೃಷ್ಟಿಕೋನವನ್ನು ಗುರುತಿಸಿದರು. ಸ್ಯಾಮುಯೆಲ್ಸನ್ ಪ್ರಸಿದ್ಧವಾಗಿ ಉದ್ಗರಿಸಿದಂತೆ "ನಾವೆಲ್ಲರೂ ಈಗ ಕೇನ್ಸ್ ವಾದಿಗಳು!"

'ದ ಜನರಲ್ ಥಿಯರಿ' ಸಮಗ್ರ ಅರ್ಥಶಾಸ್ತ್ರ ಮತ್ತು ಚಲನಾತ್ಮಕ ಆರ್ಥಿಕ ಸಿದ್ಧಾಂತಗಳನ್ನು ಪರಿಚಯಿಸುವ ಮೂಲಕ ಹೊಸ ಕ್ಷೇತ್ರಗಳ ಪ್ರಮುಖ ಬೆಳವಣಿಗೆ ಪ್ರಚೋದಿಸಿದ್ದು ಮಾತ್ರವಲ್ಲದೆ, ರಾಷ್ಟ್ರೀಯ ಆದಾಯದ ಲೆಕ್ಕಾಚಾರ ಮತ್ತು ಅದರ ಅಂತಾರಾಷ್ಟ್ರೀಯ ಸಮನ್ವಯತೆಯ ಬೆಳವಣಿಗೆಗೆ ವಿಶೇಷವಾಗಿ ರಿಚರ್ಡ್ ಸ್ಟೋನ್ (1913-1991) ಅವರಿಂದ ಮತ್ತು ಪ್ರಾಯೋಗಿಕ ಆರ್ಥಿಕ ಮತ್ತು ವ್ಯಾಪಾರ ಆವರ್ತ ಸಂಶೋಧನೆಯ ಬೆಳವಣಿಗೆಗೆ ನಾಂದಿಯಾಯಿತು. 1930ರಲ್ಲಿ ನಾರ್ವೆಯ ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ರಾಗ್ನಾರ್ ಫ್ರಿಶ್ (1895-1973) ಅವರ ಆಶಯದಂತೆ 'ಎಕೊನೋಮೆಟ್ರಿಕ್' ಸೊಸೈಟಿಯನ್ನು ಸ್ಥಾಪಿಸಲಾಯಿತು. ಇದು ಆರ್ಥಿಕ ಸಿದ್ಧಾಂತಗಳನ್ನು ಗಣಿತೀಯವಾಗಿ ರೂಪಿಸಲು ಮತ್ತು ಆ ಸಿದ್ಧಾಂತಗಳನ್ನು ಗಣಿತ ಮತ್ತು ಸಂಖ್ಯಾಶಾಸ್ತ್ರೀಯವಾಗಿ ಪರೀಕ್ಷಿಸಲು ಮೀಸಲಾಗಿರುವ ಸಂಸ್ಥೆಯಾಗಿದೆ. ಕೇನ್ಸ್ ಅವರ ಆದಾಯ ಮತ್ತು ವೆಚ್ಚದ ಮಾದರಿಗಳನ್ನು ಈಗ 'ಎಕೊನೊಮೆಟ್ರಿಕ್ಸ್' ರೂಪದಲ್ಲಿ ಪರಿಶೀಲಿಸಲಾಗುತ್ತದೆ. ಪ್ರಾರಂಭದಲ್ಲಿ ಬಿಡಿಬಿಡಿಯಾಗಿ ದೇಶಗಳಿಗೆ ಮತ್ತು ನಂತರ ಪರಸ್ಪರ ವ್ಯಾಪಾರ ವಹಿವಾಟು ನಡೆಸುತ್ತಿರುವ ಹಲವು ದೇಶಗಳಿಗೆ ಸಾಮೂಹಿಕವಾಗಿಯೂ ಇದನ್ನು ಅಳವಡಿಸಲಾಯಿತು.

ರಿಚರ್ಡ್ ಮಸ್‌ಗ್ರೇವ್(1910-2007) ಅವರಿಂದಾಗಿ ಸಾರ್ವಜನಿಕ ಹಣಕಾಸು ಪುನರ್ ವ್ಯಾಖ್ಯಾನವನ್ನು ಪಡೆಯಿತು. ಅವರು ವಿಷಯದ ಕುರಿತ ತಮ್ಮ ತ್ರಿಪಕ್ಷೀಯ ದೃಷ್ಟಿಕೋನದ ಮೂಲಕ ಕೇನ್ಸ್ ಅವರ ಸಂದೇಶವನ್ನು ಚರ್ಚೆಗೆ ಎತ್ತಿಕೊಂಡರು. 1959ರಲ್ಲಿ ಅವರು ಪ್ರಕಟಿಸಿದ ಪ್ರಭಾವಿ ಪಠ್ಯಪುಸ್ತಕದಲ್ಲಿ ಸರ್ಕಾರ ನಿರ್ವಹಿಸುವ ಮೂರು ರೀತಿಯ ವಿಭಿನ್ನ ಕಾರ್ಯಗಳನ್ನು ಸೂಚಿಸಿದ್ದಾರೆ. ಅವುಗಳೆಂದರೆ ಹಂಚಿಕೆ, ವಿತರಣೆ ಮತ್ತು ಸ್ಥಿರತೆ. ಕೇನ್ಸ್ ಪರಿಣಾಮಕಾರಿ ಬೇಡಿಕೆ ನಿರ್ವಹಣೆ ಮತ್ತು ಆದಾಯ ನೀತಿಯನ್ನು ಬಳಸಿಕೊಂಡು ಅಧಿಕ ಮಟ್ಟದ ಉದ್ಯೋಗ ಮತ್ತು ಬೆಳವಣಿಗೆ ನೀಡುವ ಹಾಗೂ ಸಾಮಾಜಿಕವಾಗಿ ಅಪೇಕ್ಷಿತ ಆದಾಯ ಮತ್ತು ಸಂಪತ್ತಿನ ವಿತರಣೆಗೆ ಸರ್ಕಾರ ಪ್ರಯತ್ನಿಸಬೇಕೆಂದು ವಾದಿಸಿದ್ದಾರೆ.

ಕೇನ್ಸ್ ಅವರ ಸಂದೇಶ ಆರ್ಥಿಕ ನೀತಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿತು. ದೇಶೀಯ ಹೂಡಿಕೆ ಬೇಡಿಕೆ, ದೇಶಿಯ ಅನುಭೋಗಿ ಬೇಡಿಕೆ, ಸಾರ್ವಜನಿಕ ವೆಚ್ಚ ಮತ್ತು ರಫ್ತುಗಳ ಮೇಲೆ ಪ್ರಭಾವ ಬೀರುವ ಆರ್ಥಿಕ ನೀತಿ ಕ್ರಮಗಳ ಮೂಲಕ ಸಮಗ್ರ ಆದಾಯ ಮತ್ತು ವೆಚ್ಚಗಳ ನಿರ್ವಹಣೆ ಅದರ ಮುಖ್ಯ ಪರಿಕಲ್ಪನೆಯಾಗಿದೆ. ಒಳಸುರಿ (injection) ಎನ್ನಲಾಗುವ ಇವುಗಳ ನಿರ್ವಹಣೆ ಒಂದು ಕಡೆಯಾದರೆ, ಮತ್ತೊಂದು ಕಡೆ ದೇಶಿಯ ಉಳಿತಾಯಗಳು, ತೆರಿಗೆಗಳು ಮತ್ತು ರಫ್ತುಗಳನ್ನು-_ಸೋರಿಕೆ (Leakages) ಎನ್ನಲಾಗುವ- ನಿರ್ವಹಿಸುವುದು ಕೇನ್ಸ್ ಸಂದೇಶದ ತಿರುಳು. ವಾಣಿಜ್ಯ ಚಕ್ರಗಳನ್ನು ನಿರ್ವಹಿಸುವುದು, ಉದ್ಯೋಗ ವೃದ್ಧಿ ದರ ಸಾಧಿಸಲು, ಸ್ಥಿರ ಬೆಲೆ ಮಟ್ಟ ಕಾಪಾಡುವುದು, ವಿದೇಶಿ ವ್ಯಾಪಾರ ಸಮತೋಲನ ಕಾಯ್ದುಕೊಳ್ಳುವುದು ಮತ್ತು ಸ್ಥಿರ ಬೆಳವಣಿಗೆ ಸಾಧಿಸಲು ನಿಯಮಿತವಲ್ಲದ(anti-Cyclical) ಹಣಕಾಸು ಮತ್ತು ವಿತ್ತೀಯ ನೀತಿಗಳನ್ನು ವಿನ್ಯಾಸಗೊಳಿಸಲಾಗಿದೆ. ಆರ್ಥಿಕ ಹಿಂಜರಿತದ ಅವಧಿಯಲ್ಲಿ ಹಣಕಾಸು ಸಂಸ್ಥೆಗಳು ಬಡ್ಡಿ ದರಗಳನ್ನು ಕಡಿತ ಮಾಡಲು ಮತ್ತು ಸರ್ಕಾರ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು, ತೆರಿಗೆಗಳನ್ನು ಕಡಿಮೆ ಮಾಡಲು ಆಯವ್ಯಯ ಕೊರತೆ ತುಂಬಲು ಮಾರ್ಗದರ್ಶನ ಮಾಡುತ್ತವೆ. ಆದರೆ ಉತ್ಕರ್ಷದ ಹಂತದಲ್ಲಿ ಬಡ್ಡಿದರಗಳನ್ನು ಹೆಚ್ಚಿಸುವುದು. ಸಾರ್ವಜನಿಕ ವೆಚ್ಚ ತಗ್ಗಿಸುವುದು ಮತ್ತು ತೆರಿಗೆ ಹೆಚ್ಚಿಸುವುದರ ಮೂಲಕ ಆಯವ್ಯಯ ಹೆಚ್ಚಳಕ್ಕೆ ಮಾರ್ಗದರ್ಶನ ಮಾಡುತ್ತವೆ. ಈ ರೀತಿ ಮಾಡುವುದರ ಮೂಲಕ ಆರ್ಥಿಕ ಚಟುವಟಿಕೆಗಳಲ್ಲಿನ ಏರಿಳಿತಗಳನ್ನು ತಗ್ಗಿಸಬಹುದು ಮತ್ತು ಒಟ್ಟಾರೆಯಾಗಿ ಉದ್ಯೋಗ ಮತ್ತು ಉತ್ಪಾದನೆಯ ತೀವ್ರ ನಷ್ಟವನ್ನು

ತಪ್ಪಿಸಬಹುದು. ಉತ್ಕರ್ಷಗಳು ಮತ್ತು ಕುಸಿತಗಳ ಅನುಕ್ರಮದಲ್ಲಿ ಆಯವ್ಯಯ ಕೊರತೆ ಮತ್ತು ಹೆಚ್ಚುವರಿಗಳನ್ನು ರದ್ದುಗೊಳಿಸಲು ಉದ್ದೇಶಿಸಲಾಗಿತ್ತು. ಆದ್ದರಿಂದ ಆರ್ಥಿಕತೆಯಲ್ಲಿ ಸ್ಥಿರತೆಯನ್ನು ಸ್ಥಾಪಿಸುವ ದೃಷ್ಟಿಕೋನದಿಂದ ಸರಾಸರಿಯಲ್ಲಿ ಸಮತೋಲಿತ ಆಯವ್ಯಯವನ್ನು ಪಡೆಯಬಹುದು(ಒಂದು ದೇಶದ ಮೂಲ ಸೌಕರ್ಯ (ರಸ್ತೆಗಳು, ನದಿಗಳು, ಬಂದರುಗಳು) ಗಳಲ್ಲಿ ಹಾಗೂ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಸಾರ್ವಜನಿಕ ಹೂಡಿಕೆಗೆ ಅವಕಾಶ ನೀಡಲು ಆಯವ್ಯಯ ಕೊರತೆಗೆ ಅವಕಾಶ ನೀಡಲಾಗಿದೆ). ಉನ್ನತ ಮಟ್ಟದ ಉದ್ಯೋಗ ಮತ್ತು ಸಾಮರ್ಥ್ಯದ ಬಳಕೆ, ಸ್ಥಿರವಾದ ಬೆಲೆ ಮಟ್ಟ, ಸಮತೂಕದ ವಹಿವಾಟು ಮತ್ತು ಸ್ಥಿರ ಆರ್ಥಿಕ ಬೆಳವಣಿಗೆಯನ್ನು ಈ ನೀತಿಯ ಗುರಿ ಎಂದು ಪ್ರತಿಸ್ಥಾಪಿಸಲಾಯಿತು. ಈ ಗುರಿಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆಯೇ ಅಥವಾ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದಾರೆ ಎನ್ನುವುದರ ಆಧಾರದ ಮೇಲೆ ಸರ್ಕಾರದ ಯಶಸ್ಸು ಅಥವಾ ವೈಫಲ್ಯವನ್ನು ಅಳೆಯಲಾಗುತ್ತದೆ.

ಈ ಕೆಳಗೆ ಕಾಣಿಸಿರುವಂತೆ, ಕೇನ್ಸ್ ಅವರ ವಿಚಾರಧಾರೆಗಳು 1970 ರ ದಶಕದಲ್ಲಿ ಪ್ರಸ್ತುತತೆಯನ್ನು ಕಳೆದುಕೊಂಡವಾದರೂ ಅವರ ಕೆಲವು ಮೂಲಭೂತ ಆಲೋಚನೆಗಳು ಕಾಲಾತೀತವೆನಿಸಿವೆ. ಕೇನ್ಸ್ ವಿರೋಧಿ ವಾಗ್ವಾದದಲ್ಲಿ ನಿರತರಾಗಿರುವ ಸರ್ಕಾರಗಳು, ಉದಾಹರಣೆಗೆ ಯುದ್ಧದಂತಹ ವಿಷಯದಲ್ಲಿ ಹಣಕಾಸು ಒದಗಿಸಲು ಆಯವ್ಯಯದ ಕೊರತೆ ಎದುರಿಸಿದವು. ಹಾಗೇ ಇತ್ತೀಚಿನ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಎದುರಾದ ಜಾಗತಿಕ ಆರ್ಥಿಕ ಕುಸಿತದ ಭೀತಿಯನ್ನು ನಿವಾರಿಸಲು ಅಮೇರಿಕಾ ಸೇರಿದಂತೆ ಹಲವಾರು ದೇಶಗಳಲ್ಲಿ ಕೇನ್ಸ್ ವಾದದ ಕೆಲವು ಅಂಶಗಳು ಪುನಃ ಚಾಲ್ತಿಗೆ ಬಂದಿದೆ. ಕೇನ್ಸ್ ಜೀವನ ಚರಿತ್ರೆಗಾರ ರಾಬರ್ಟ್ ಸ್ಕೈಡೆಲ್ಸ್ಕಿ (1939) ತಮ್ಮ ಒಂದು ಪುಸ್ತಕ 'ದಿ ರಿಟರ್ನ್ ಆಫ್ ದಿ ಮಾಸ್ಟರ್' ಎಂಬುದರಲ್ಲಿ ಈ ಬೆಳವಣಿಗೆಯನ್ನು ಚರ್ಚಿಸಿದ್ದಾರೆ.